ಸಂಪುಟ 01 | ಸಂಚಿಕೆ 227 ಗುರುವಾರ 22 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ತೊದಲುವಿಕೆ ಜಾಗೃತಿ ದಿನ (International Stuttering Awareness Day) ತೊದಲುವಿಕೆಯ ಬಗ್ಗೆ ಅರಿವು ಮೂಡಿಸಲು ಮತ್ತು ತೊದಲುವಿಕೆ ಹೊಂದಿರುವವರಿಗೆ ಬೆಂಬಲ ನೀಡಲು ಆಚರಿಸಲಾಗುತ್ತದೆ.

2)ರಾಷ್ಟ್ರೀಯ ಬೀಜಗಳ ದಿನ (National Nut Day) ಬಾದಾಮಿ, ಗೋಡಂಬಿ, ಅಕ್ರೋಟ್ ಮುಂತಾದ ಬೀಜಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ದಿನ.

3) ರಾಷ್ಟ್ರೀಯ ನಾಯಿಗಳ ದಿನ (National Make a Dog's Day) ನಾಯಿಗಳಿಗೆ ಪ್ರೀತಿ, ಆರೈಕೆ ಮತ್ತು ಕಾಳಜಿ ತೋ-ರಿಸುವ ದಿನ.

4)ಬುದ್ಧಿವಂತಿಕೆ ಹೆಮ್ಮೆಯ ದಿನ (Smart Is Cool Day) ಕಲಿಕೆ, ಜ್ಞಾನ ಮತ್ತು ಬುದ್ಧಿವಂತಿಕೆಯ ಮಹತ್ವವನ್ನು ಪ್ರೋತ್ಸಾಹಿಸುವ ದಿನ.

ಸುಭಾಷಿತ

ಜಾತಿಯ ಬಗ್ಗೆ ಕೇಳಬೇಡ, ಜಾತಿಯನ್ನು ಹೇಳಬೇಡ, ಜಾತಿಯ ಬಗ್ಗೆ ಚಿಂತಿಸಲೂ ಬೇಡ.

-ನಾರಾಯಣ ಗುರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ನಾಡಹಬ್ಬ ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿ

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮೊದಲು ನಂದಿ ಕಂಬಕ್ಕೆ ಪೂಜೆ ಸಲ್ಲಿಸಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಜಿಲ್ಲಾ ಮಂತ್ರಿಗಳು ಸಚಿವರುಗಳು ನಂತರ ನಾಡ ಹಬ್ಬ ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಗೆ ಮೈಸೂರು ಅರಮನೆ ಆವರಣದಲ್ಲಿ ಚಿನ್ನದ ಅಂಬಾರಯ ತಾಯಿ ಚಾಮುಂಡೇಶ್ವರಿ ದೇವಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾಕ್ಟರ್ ಎಸ್ ಸಿದ್ದರಾಮಯ್ಯನವರು ಸಚಿವರಾದ ಶಿವರಾಜ್ ತಂಡಗಿ ಬಸಂತಪ್ಪ ಸಂಸದ ಯದುವೀರ್ ಒಡೆಯರ್ ರವರು ಹಾಗೂ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ ಸತೀಶನ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮೈಸೂರು ಜಿಲ್ಲಾಧಿಕಾರಿಗಳಾದ .ಲಕ್ಷ್ಮೀಕಾಂತ ರೆಡ್ಡಿ. ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ರವರು ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ಗೌರವ ವಂದನೆ ಸಲ್ಲಿಸಿದರು.

ಬಳಿಕ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿದ್ದು ಈ ಬಾರಿಯ ದಸರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ಜರುಗಿದ್ದು ನಾನು ಮತ್ತು ನಮ್ಮ ಸಚಿವ ಸಂಪುಟದ ಸಹೋದ್ಯೋಗಳು ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಈ ಬಾರಿ ತಾಯಿ ಚಾಮುಂಡೇಶ್ವರಿ ಕೃಪೆಯಿಂದ ಮಳೆ ಬೆಳೆಯಾಗಿ ರೈತರ ಬದುಕು ಹಸನಾಗಲಿ ನಾಡಿನ ಜನತೆ ಸುಖ ಶಾಂತಿಯಿಂದ ಬದುಕುವಂತಾಗಲಿ ಶಾಂತಿ ಸಹ ಬಾಳ್ವೆ ಸ್ನೇಹ ಬಾಂಧವ್ಯ ಬಿಸಿಯುವಂತಾಗಲಿ ವೈರತ್ವ ತೊಲಗಲಿ ಮತ್ತಷ್ಟು ಬಾಂಧವ್ಯ ಬಿಸಿಯುವಂತಾಗಲಿ ಎಂದು ತಾಯಿಯಲ್ಲಿ ಬೇಡಿಕೊಂಡಿದ್ದೇವೆ ಎಂದು ತಿಳಿಸಿದರು ಅಲ್ಲದೆ

ಭಕ್ತಿಯ ಭಾವ, ಪರಂಪರೆಯ ವೈಭವ : ಐತಿಹಾಸಿಕ ಜಂಬೂಸವಾರಿಗೆ ಶುಭಾರಂಭ ವಾಗಿದ್ದು ವಿಶ್ವವಿಖ್ಯಾತ ಮೈಸೂರು ದಸರಾ ಅಂಗವಾಗಿ ಅರಮನೆಯ ಆವರಣದಲ್ಲಿ ಇಂದು ಶುಭ ಮೀನ ಲಗ್ನದಲ್ಲಿ ವಿಜಯದಶಮಿ ಮೆರವಣಿಗೆಯನ್ನು



ಸನ್ಮಾನ್ಯ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಉದ್ಘಾಟಿಸಿ ಗಜರಾಜ "ಪ್ರಶಾಂತ" ಹೊತ್ತ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವ-ರಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಐತಿಹಾಸಿಕ ಜಂಬೂಸವಾರಿಗೆ ಭವ್ಯ ಚಾಲನೆ ನೀಡಿದರು. ಶತಮಾನಗಳ ಇತಿಹಾಸ, ಭಕ್ತಿ ಮತ್ತು ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿ-ಕೆಯನ್ನು ಸಾರುವ ಜಂಬೂಸವಾರಿ, ಮೈಸೂರು ದಸರೆಯ ವೈಭವದ ಕಿರೀಟಪ್ರಾಯ.

ತಾಯಿ ಚಾಮುಂಡೇಶ್ವರಿಯ ಕೃಪಾಶೀರ್ವಾದದೊಂದಿಗೆ ನಾಡಿನ ಜನತೆಯ ಬದುಕಿನಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸಲಿ ಎಂಬ ಆಶಯದೊಂದಿಗೆ ಈ ಬಾರಿಯ ವಿಜಯದಶಮಿಯ ಸಂಭ್ರಮ ಕಳೆಗಟ್ಟಿತು. ಈ ಶುಭ ಸಂದರ್ಭದಲ್ಲಿ ಮೈಸೂರು ರಾಜವಂಶದ ಪ್ರತಿನಿಧಿ ಹಾಗೂ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ವಸಂತಪ್ಪ ಶಿವರಾಜ ತಂಗಡಗಿ, ಸಿ ಪುಟ್ರಂಗ್ ಶೆಟ್ಟಿ ಆರ್ ನರೇಂದ್ರಸ್ವಾಮಿ ಶಾಸಕರಾದ ತನ್ವೀರ್ ಸೇಟ್ ಕೆ ಹರೀಶ್ ಗೌಡವಿಶೇಷ ಅತಿಥಿಗಳಾದ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ ಸತೀಶನ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮೈಸೂರು ಜಿಲ್ಲಾಧಿಕಾರಿಗಳಾದ .ಲಕ್ಷ್ಮೀಕಾಂತ ರೆಡ್ಡಿ.ಜಿ, ಮೈಸೂರು ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಗರಾಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯನವರು ಎದೆ ವೇಳೆ ಮಾತನಾಡಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಭವ್ಯ ಮೆರವಣಿಗೆಯಲ್ಲಿ ವಿವಿಧ ಜಿಲ್ಲೆಗಳು, ರಾಜ್ಯಗಳು ಹಾಗೂ ಇಲಾಖೆಗಳ ಸ್ತಬ್ಧಚಿತ್ರಗಳು ನಾಡಿನ ಸಾಂಸ್ಕೃತಿಕ ಶ್ರೀಮಂತಿ-ಕೆ, ಐತಿಹಾಸಿಕ ಪರಂಪರೆ, ಜನಪದ ಕಲೆಗಳು ಮತ್ತು ಸಾಧನೆಗಳನ್ನು ಅನಾವರಣಗೊಳಿಸಿದ ಕ್ಷಣಗಳಿಗೆ ಸಾಕ್ಷಿಯಾದೆ. ಎಂದು ಹೇಳಿದ ಅವರು ಭಾರತೀಯ ವಾಯುಸೇನೆ ಹಾಗೂ ನೌಕಾಪಡೆಯ ಸ್ತಬ್ಧಚಿತ್ರಗಳು ದೇಶದ ರಕ್ಷಣಾ ಶಕ್ತಿ ಮತ್ತು ಶೌರ್ಯವನ್ನು ಸಾರಿದರೆ, ಕೇರಳದ ಪ್ರವಾಸೋದ್ಯಮದ ಪ್ರಾಕೃತಿಕ ಸೌಂದರ್ಯ ಹಾಗೂ ತಮಿಳುನಾಡಿನ ಸಾಂಪ್ರದಾಯಿಕ ಜಲ್ಲಿಕಟ್ಟು ಕ್ರೀಡೆಯ ಸ್ತಬ್ಧಚಿತ್ರಗಳು ವಿಶೇಷ ಆಕರ್ಷಣೆ ಯಾಗಿವೆ ಎಂದು ಹೇಳಿದ ಸಚಿವರು ಕರ್ನಾಟಕದ ಸಾರಿಗೆ ಸಂಸ್ಥೆಗಳ ಸೇವಾ ಬದ್ಧತೆ, ಸಮಾಜ ಕಲ್ಯಾಣ ಇಲಾಖೆಯ ಜನಪರ ಯೋಜನೆಗಳು, ವಿವಿಧ ಇಲಾಖೆಗಳ ಹಾಗೂ ವಿವಿಧ ಜಿಲ್ಲೆಗಳ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಬಿಂಬಿಸಿದ ಸ್ತಬ್ಧಚಿತ್ರಗಳು ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿವೆ ಎಂದು ತಿಳಿಸಿದರು ದೇಶದ ವೈವಿಧ್ಯತೆ, ನಾಡಿನ ಪರಂಪರೆ ಮತ್ತು ಸಾಧನೆಗಳನ್ನು ಒಂದೇ ವೇದಿಕೆಯಲ್ಲಿ ಅನಾವರಣಗೊಳಿಸಿದ ಈ ಮೆರವಣಿಗೆ ದಸರಾ ಸಂಭ್ರಮವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿತು.

ವೈವಿಧ್ಯಮಯ ರೀತಿಯಲ್ಲಿ ಪರಂಪರೆ ಸಾಂಪ್ರದಾಯದಂತೆ ಈ ದಸರ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗಿದೆ ಎಂದರು ವಿಶ್ವವಿಖ್ಯಾತ ಮೈಸೂರು ದಸರಾ ಪ್ರಮುಖ ಭಾಗವಾದ ಜಂಬೂಸವಾರಿ ಅದ್ದೂರಿಯಿಂದ ನೆರವೇರಿದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಿದರು. ಮೊದಲಬಾ-ರಿಗೆ ಚಿನ್ನದ ಅಂಬಾರಿಯನ್ನ ಹೊತ್ತ ಪ್ರಶಾಂತ ಹಾಕಿದ ಗಾಂಭೀರ್ಯ ಹೆಜ್ಜೆಗೆ ಲಕ್ಷಾಂತರ ಮಂದಿ ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದ ಸಚಿವರು ಅಭಿಮನ್ಯು ಉತ್ತರಾಧಿಕಾರಿಯಾದ ಪ್ರಶಾಂತ್ 750 ಕೆಜಿ ಭಾರದ ಚಿನ್ನದ ಅಂಬಾರಿಯನ್ನ ಹೊತ್ತು ತಾನು ಅಭಿಮನ್ಯು ಉತ್ತರಾಧಿಕಾ-ರಿಯಾಗಲು ಅರ್ಹ ಎಂದು ಸಾಬೀತುಪಡಿಸಿದ. ಪ್ರಶಾಂತ್ ಆನೆ ಎಂದು ಸಚಿವರು ತಿಳಿಸಿದರು ಈ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯನ್ನು ನೋಡಲು ರಾಜ್ಯದ ದೇಶದ ಮೂಲೆ ಮೂಲೆಗಳಿಂದ ಹರಿದು ಬಂದ ಭಕ್ತ ಸಾಗರ ರಸ್ತೆಯ ಬದಿಯಲ್ಲಿ ನಿಂತು ಅಂಬಾರಿ ಹೊತ್ತ ಪ್ರಶಾಂತ್ ಆನೆಯ ನಡಿಗೆಗೆ ಜೈಕಾರ ಹಾಕಿದರು ರಸ್ತೆ ಉದ್ದಕ್ಕೂ ವಿವಿಧ ಜಿಲ್ಲೆಗಳ ಹಾಗೂ ರಾಜ್ಯಗಳ ಶಬ್ದ ಚಿತ್ರಗಳು ಜನರ ಗಮನ ಸೆಳೆದವು

ಸಂಸ್ಕೃತಿ, ಧರ್ಮ ನಮ್ಮ ಬದುಕಿನ ದಾರಿದೀಪ: ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ

❑ ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ಗ್ರಾಮೀಣ ಭಾಗದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ನಡುವೆ ಆತ್ಮೀಯತೆ ಹಾಗೂ ಸಾಮರಸ್ಯವನ್ನು ಬೆಳೆಸುವ ಮಹತ್ವದ ಕೊಂಡಿಗಳಾಗಿವೆ ಎಂದು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕ ಎಂ. ಎಸ್. ಸೋಮಲಿಂಗಪ್ಪ ಹೇಳಿದರು.

ತಾಲ್ಲೂಕಿನ ಅಗಸನೂರು ಗ್ರಾಮದ ಸಮೀಪ ಹಮ್ಮಿಕೊಳ್ಳಲಾಗಿದ್ದ 'ಶ್ರೀ ದೇವಿ ಮಹಾತ್ಮೆ' ಪ್ರಥಮ ವರ್ಷದ ಪುರಾಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ದೇವಿಯ ದರ್ಶನ ಪಡೆದು ಅವರು ಮಾತನಾಡಿದರು. ನಮ್ಮ ನಾಡಿನ ಸಾಂಸ್ಕೃತಿಕ ಮೌಲ್ಯಗಳು ಮತ್ತು ಧಾರ್ಮಿಕ ಪರಂಪರೆಯನ್ನು ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇಂತಹ



ಪುರಾಣ ಪ್ರವಚನಗಳು ಗ್ರಾಮೀಣ ಜನರಲ್ಲಿ ಸದ್ವಿಚಾರಗಳನ್ನು ಮೂಡಿಸುತ್ತವೆ. ಕ್ಷೇತ್ರದ ಸಮಸ್ತ ಜನತೆಗೆ ಶ್ರೀ ದೇವಿಯು ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ಕರುಣಿಸಲಿ ಎಂದು ಅವರು ಈ ಸಂದರ್ಭದಲ್ಲಿ ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರು ಸ್ಥಳೀಯ ಭಕ್ತಾದಿಗಳು ಹಾಗೂ ಗ್ರಾಮಸ್ಥರೊಂದಿಗೆ ಅತ್ಯಂತ ಆತ್ಮೀಯವಾಗಿ ಬೆರೆತು ಸಂವಾದ ನಡೆಸಿದರು. ಈ ಧಾರ್ಮಿಕ ಮಹೋತ್ಸವದಲ್ಲಿ ಪ್ರಮುಖ ಮುಖಂಡರಾದ ಮೇಕಲ್ ವೀರೇಶ್, ಶಿವಪ್ಪ, ಬಸವರಾಜ್, ಮಾದಣ್ಣ, ಕುಬೇರ, ಯಲ್ಲಪ್ಪ ಸೇರಿದಂತೆ ಅಗಸನೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ವರದಿ:ಮಸೀದಿ,ಅಬ್ದುಲ್ ಗೌಸ್,ಸಿರುಗುಪ್ಪ

ಸರ್ವ ಧರ್ಮ ಭಾವೈಕ್ಯ ಸಮಾವೇಶಕ್ಕೆ ಜಮೀತ್ ಉಲಮಾ ಕರೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಜಿಲ್ಲಾ ಜಮೀತ್ ಉಲಮಾ ಆಶ್ರಯದಲ್ಲಿ ಸರ್ವಧರ್ಮ ಭಾವೈಕ್ಯ ಸಮಾವೇಶದ ಪೂರ್ವಭಾವಿ ಸಭೆಯನ್ನು ಗೌಳಿಪುರದ ಮಸ್ಜಿದ್ ನಲ್ಲಿ ಕರೆಯಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸೈಯದ್ ಮುಫ್ತಿ ಯುನುಸ್ ಕಾಸ್ಮೆ ವಹಿಸಿದ್ದರು.

ತಾಲೂಕಿನ ಸಮಸ್ತ ಮುಸ್ಲಿಂ ಸಮುದಾಯಗಳ ಎಲ್ಲಾ ಸದಸ್ಯರನ್ನು ಕುರಿತು ಇದೆ ದಿನಾಂಕ : 31 -10- 2026 ಬೆಳಗ್ಗೆ 10 ಗಂಟೆ ಯಿಂದ ನಗರದ ಲಿಂಗಸಗೂರಿನ ಜನತಾ ಕಾಲೋನಿಯಲ್ಲಿ ಇರುವ ಮಹಾಂತೇಶ್ವರ ಮಠದಲ್ಲಿ ಸರ್ವಧರ್ಮ ಭಾವೈಕ್ಯ ಸಮಾವೇಶವನ್ನು ಮಾಡಲು ಒಮ್ಮತದಿಂದ ತೀರ್ಮಾನಿಸಿ, ನಿರ್ಧರಿಸಲಾಗಿದ್ದು ನಾಡಿನ ಧರ್ಮಗುರು ಗಳನ್ನು, ಚರ್ಚ್ ಫಾದರ್ ಹಾಗೂ ಮೌಲಾನ, ಪೂಜ್ಯಶ್ರೀ ಗಳನ್ನು ಸಮಾವೇಶಕ್ಕೆ ಆಹ್ವಾನಿಸಿ



ಸರ್ವ ಧರ್ಮ ಭಾವೈಕ್ಯ ಸಮಾವೇಶವನ್ನು ಮಾಡಲು ಈ ಪೂರ್ವಾಭಿ ಸಭೆಯನ್ನು ಕರೆದು ಒಪ್ಪಿಗೆ ಪಡೆಯಲಾಯಿತು, ಈ ಸಂದರ್ಭದಲ್ಲಿ ತಾಲೂಕಿನ ಇಸಾಲೆ ಮಸೂರಾ ಯೂನಿಟ್ ಘಟಕದ ಅಧ್ಯಕ್ಷ ಹಫೀಸ್ ಖ್ಯಿಯೂಮ್, ತಾಲೂಕ ಅಧ್ಯಕ್ಷ ಮೌಲಾನಾ ಅಮೀನ್ ಜಿಲ್ಲಾ ಖಜಾಂಚಿ ಹಾಜಿ ಸಾದಿಕ ಗೌಳಿಪುರ್, ತಾಲೂಕ ಕಾರ್ಯದರ್ಶಿ ಮೊಹಮ್ಮದ್ ಹನೀಫ್ ಗ್ಯಾರಂಟಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಸೈಯದ್ ಖಾಜಾ ಹುಸೇನ್ ಫುಲ್ ವಾಲೆ, ಮುನ್ನಖಾಜಿ, ಇಲಿಯಾಸ್, ಜಾಕಿರ್ ಭಾಯ್, ಆಸಿಫ್ ಹಟ್ಟಿ , ಡಾ.ಜಲಾಲುದ್ದೀನ್ ಅಕ್ಬರ್, ಅಮೀನ್ ಗೌಳಿಪೂರ್ ಸೇರಿದಂತೆ ಮುಸ್ಲಿಂ ಯುವಕರು ಉಲಮಾ ಮೌಲಾನಾ ಗಳು ಉಪಸ್ಥಿತರಿದ್ದರು.

ಸಮಾಜಮುಖಿ ಕಾರ್ಯ ಮಾಡುವ ಮೂಲಕ ನಾಲವಾರ ಪೂಜ್ಯರ ಜನ್ಮದಿನದ ಅಂಗವಾಗಿ 155ಕ್ಕೂ ಹೆಚ್ಚು ಬುದ್ದಿ ಮಾಧ್ಯರಿಗೆ ಉಚಿತ ಕ್ಷೌರ ಸೇವೆ

❑ ನೈಜ್ಯ ದೆಸೆ ನ್ಯೂಸ್

ಕಲಬುರಗಿ: ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಮದ ಸದ್ಗುರು ಶ್ರೀ ಕೋರಿಸಿದ್ದೇಶ್ವರ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಷ.ಬ್ರ.ಡಾ. ಸಿದ್ಧ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ 62ನೇ ವರ್ಷದ ಜನ್ಮದಿನದ ಅಂಗವಾಗಿ, ಕಲಬುರಗಿ ನಗರದ ಬಿದ್ದಾಪೂರ ಕಾಲೋನಿಯ ಅನಾಥ ನಿರ್ಗತಿಕರ ಕೇಂದ್ರದಲ್ಲಿ 155ಕ್ಕೂ ಹೆಚ್ಚು ಅನಾಥ ಹಾಗೂ ಮಾನಸಿಕ ಬುದ್ಧಿ ಮಾಧ್ಯ-ರಿಗೆ ಉಚಿತವಾಗಿ ಕ್ಷೌರ ಸೇವೆ ಸಲ್ಲಿಸಲಾಯಿತು.

ಕಲಬುರಗಿ ಜಿಲ್ಲೆಯ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಾಗೂ ಸಮಾಜ ಸೇವಕರಾದ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಅವರು ಕಳೆದ 18 ವರ್ಷಗಳಿಂದ ಪೂಜ್ಯರ ಜನ್ಮದಿನದ ಅಂಗವಾಗಿ ವಿಭಿನ್ನ ರೀತಿಯ ಸಮಾಜಮುಖಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದು, ಈ ಬಾರಿಯೂ ನಿಸ್ವಾರ್ಥವಾಗಿ ಉಚಿತ ಕ್ಷೌರ ಸೇವೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪರಮ ಪೂಜ್ಯ ಶ್ರೀ ರಾಜಶಿವಯೋಗಿ ಮಹಾಸ್ವಾಮಿಗಳು, "ಪೂಜ್ಯರ ಜನ್ಮದಿನದಂದು ಅನಾಥ ಹಾಗೂ ಮಾನಸಿಕ ಬುದ್ಧಿ ಮಾಧ್ಯರಿಗೆ ಉಚಿತವಾಗಿ ಕ್ಷೌರ ಸೇವೆ



ಸಲ್ಲಿಸುವ ಮೂಲಕ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಅವರು ನಿಸ್ವಾರ್ಥ ಸಮಾಜ ಸೇವೆ ಮಾಡುತ್ತಿದ್ದಾರೆ. ಇಂತಹ ಸೇವಾ ಕಾರ್ಯಗಳು ಸಮಾಜಕ್ಕೆ ಮಾದರಿಯಾಗಿವೆ" ಎಂದು ಹೇಳಿದರು.

ನಾಗಲಿಂಗಯ್ಯ ಹಿರೇಮಠ ಮಹಾಸ್ವಾಮಿಗಳು ಹಾಗೂ ವೀರಶೈವ ಸಮಾಜದ ಮುಖಂಡರು ಮಾತನಾಡಿ, "ಬಡ ಕುಟುಂಬದಲ್ಲಿ ಹುಟ್ಟಿ, ಬಡವರು ಹಾಗೂ ಅನಾಥರಿಗಾಗಿ ಸೇವೆ ಸಲ್ಲಿಸುತ್ತಿರುವ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಅವರ ಕಾರ್ಯ ಶ್ಲಾಘನೀಯ. ಅವರೊಂದಿಗೆ ಸೇವೆ ಸಲ್ಲಿಸುತ್ತಿರುವ ಎಲ್ಲ ಕಾಯಕ ಬಂಧುಗಳ ಮೇಲೂ ಮಹಾಗುರುವಿನ ಆಶೀರ್ವಾದ ಸದಾ ಇರಲಿ" ಎಂದು ಹಾರೈಸಿದರು.

ಈರಣ್ಣ ಸಿ. ಹಡಪದ ಸಣ್ಣೂರ, ಕಲಬುರಗಿ ಜಿಲ್ಲಾ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷರು ಮಾತನಾಡಿ, "ನಮ್ಮ ಸಮಾಜದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಾಗೂ ಸಮಾಜ ಸೇವಕರಾದ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಅವರು ಪರಮ ಪೂಜ್ಯ ಶ್ರೀ ಷ.ಬ್ರ. ಡಾ. ಸಿದ್ಧ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಜನ್ಮದಿನದ ಅಂಗವಾಗಿ ವಿವಿಧೆಡೆ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಮೆಚ್ಚುವಂತಹ ಕಾರ್ಯವಾಗಿದೆ. ಮುಂದೆಯೂ ಹತ್ತು ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಮಾಜದ ಹೆಸರನ್ನು ಮತ್ತಷ್ಟು ಬೆಳಗಿಸಲಿ. ಗುರುವಿನ ಆಶೀರ್ವಾದ ಅವರ ಕುಟುಂಬದವರ ಹಾಗೂ ಅವರೊಂದಿಗೆ ಸೇವೆ ಸಲ್ಲಿಸುತ್ತಿರುವ ಕಾಯಕ ಸಮಾಜದ ಬಂಧುಗಳ ಮೇಲೆ ಸದಾ ಇರಲಿ" ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ನಿರ್ಗತಿಕರ ಕೇಂದ್ರದ ವೀರೇಶ ಸರ್, ಕಲಬುರಗಿ ಜಿಲ್ಲೆಯ ಗೌರವಾಧ್ಯಕ್ಷ ಬಸವರಾಜ ಹಡಪದ ಸುಗೂರ ಎನ್., ಜಿಲ್ಲಾ ಕಾರ್ಯಾಧ್ಯಕ್ಷ ಭಗವಂತ ಶಿಕ್ಷಕರು ಕಿರಣಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ ನೀಲೂರ, ರಾಜ್ಯ ಮಾಜಿ ಸಂಘಟನಾ ಕಾರ್ಯದರ್ಶಿ ಬಸವರಾಜ ಹಡಪದ ಶಹಾಬಾದ, ಜಿಲ್ಲಾ ಸಹಕಾರ್ಯದರ್ಶಿ ಮಹಾದೇವ ರಾವೂರ, ಕಲಬುರಗಿ ತಾಲೂಕಾಧ್ಯಕ್ಷ ಚಂದ್ರಶೇಖರ ತೋನಸನಹಳ್ಳಿ, ಪ್ರಧಾನ ಕಾರ್ಯದರ್ಶಿ ವಿನೋದ ಅಂಬಲಗಾ, ನಾಲವಾರ ಕಸಾಪ ಅಧ್ಯಕ್ಷ ಅಂಜುನಾಥ ಎಸ್. ನಾಯ್ಕಲ್, ಶಂಭುಲಿಂಗ ಹಡಪದ ಯಲಗೋಡ, ವಿಶ್ವನಾಥ ಹಡಪದ ಸುಗೂರ ಎನ್., ಮಲ್ಲಿಕಾರ್ಜುನ ಬೆಳಗುಪ್ಪಿ, ಶಂಕರ ಹಡಪದ ಹರವಾಳ ಸೇರಿದಂತೆ ನಿರ್ಗತಿಕರ ಕೇಂದ್ರದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

2350ಕ್ಕೂ ಹೆಚ್ಚು ಮಂದಿಗೆ ಉಚಿತ ಕ್ಷೌರ ಸೇವೆ ಸಮಾಜ ಸೇವಕರಾದ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಅವರು ಇದುವರೆಗೆ 2350ಕ್ಕೂ ಹೆಚ್ಚು ಅನಾಥ, ನಿರ್ಗತಿಕರು ಹಾಗೂ ವಿವಿಧ ವರ್ಗದ ಜನರಿಗೆ ಉಚಿತವಾಗಿ ಕ್ಷೌರ ಸೇವೆ ಸಲ್ಲಿಸಿರುವುದಾಗಿ ತಿಳಿಸಿದರು.

ಅನಾಥರು, ನಿರ್ಗತಿಕರು, ಅಂ-ಧರು, ವಿಶೇಷ ಚೇತನರು, ಪೌರ ಕಾರ್ಮಿಕರು, ಹಿರಿಯ ನಾಗರಿಕರು, ಬುದ್ಧಿ ಮಾಧ್ಯರು, ಸಾಧು-ಸಂತರು, ಅನಾಥ ಶಾಲಾ ಮಕ್ಕಳು, ಕಿವುಡರು, ಮೂಕರು, ಕಟ್ಟಡ ಕಾರ್ಮಿಕರು, ಬಡ ನಿರ್ಗತಿ-ಕರು, ರೈಲ್ವೆ ನಿಲ್ದಾಣದಲ್ಲಿರುವ ಹಿರಿಯರು, ಆಶ್ರಮಗಳಲ್ಲಿರುವ ಮಾನಸಿಕ ಬುದ್ಧಿ ಮಾಧ್ಯರು ಹಾಗೂ ಅನಾಥಾಶ್ರಮಗಳಲ್ಲಿರುವ ನಿರ್ಗತಿಕರಿಗೆ ಉಚಿತವಾಗಿ ಕ್ಷೌರ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ತಮ್ಮೊಂದಿಗೆ ಕಾಯಕ ಬಂಧುಗಳನ್ನು ಸೇರಿಸಿಕೊಂಡು ವಿವಿಧೆಡೆ ಇಂತಹ ಸೇವಾ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿರುವ ಅವರು, ಕ್ಷೌರ ಸೇವೆಯ ಮೂಲಕ ಸ್ವಚ್ಛತೆ ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡುತ್ತಿದ್ದಾರೆ.

ಸಾಹಿತ್ಯ ಸಿಂಚನ

ವಿಧಿಯ ತಿರುವಿನಲ್ಲಿ

ವಿಧಿಯ ತಿರುವಿನಲ್ಲಿ ಹೆಜ್ಜೆಯಿಟ್ಟಾಗ,
ಹೊಸ ಕನಸುಗಳು ಕಣ್ಣ ಮುಂದೆ ಮೂಡಿದಾಗ.
ಕಾಲದ ಆಟದಲ್ಲಿ ದಾರಿಗಳು ಬದಲಾದವು,
ಮನದ ಆಸೆಗಳು ಮೌನವಾಗಿ ಉಳಿದವು.

ನಂಬಿಕೆಯ ದೀಪವು ಗಾಳಿಗೆ ನಡುಗಿತು,
ಕನಸಿನ ಹಾದಿಯಲಿ ಕತ್ತಲು ಕವಿಯಿತು.
ಬಯಸಿದ ಬದುಕು ಕೈಜಾರಿ ಹೋದರೂ,
ಹೊಸ ಭರವಸೆಯೊಂದು ಮನದಲ್ಲಿ ಮೂಡಿತು.

ವಿಧಿಯು ಬರೆದ ಕಥೆ ಅರಿಯದ ಮನಕೆ,
ಕಣ್ಣೀರ ಹನಿಗಳೇ ಉತ್ತರವಾದವು.
ಸೋಲುಗಳ ನಡುವೆಯೂ ನಗುವನು ಹುಡುಕಿ,
ಹೃದಯದ ನೋವಿಗೆ ಧೈರ್ಯವೇ ಮದ್ದಾಯಿತು.

ತಿರುವುಗಳ ದಾರಿಯಲ್ಲಿ ಒಂಟಿಯಾಗಿ ನಡೆದರೂ,
ನೆನಪುಗಳ ನೆರಳಲ್ಲಿ ಬದುಕನ್ನು ಕಂಡೆನು.
ಕಳೆದುಹೋದ ಕ್ಷಣಗಳ ಪಾಠವನು ಕಲಿತು,
ಹೊಸ ಬೆಳಕಿನ ಕಡೆಗೆ ಹೆಜ್ಜೆಯನು ಇಟ್ಟೆನು.

ವಿಧಿಯ ತಿರುವುಗಳು ದಾರಿಯ ಅಂತ್ಯವಲ್ಲ,
ಬದುಕಿನ ಹೊಸ ಅಧ್ಯಾಯದ ಆರಂಭವಷ್ಟೇ.
ಕಾಲವು ಬದಲಾದರೂ ಕನಸು ಬದಲಾಗದಿರಲಿ,
ನಂಬಿಕೆಯ ಬೆಳಕಿನಲ್ಲಿ ನಾಳೆ ಸುಂದರವಾಗಲಿ

ಶರನ್ನವರಾತ್ರಿ ಮುಚ್ಚಳ ಕ್ಯಾಂಪಿನ ಏಳು ಮಕ್ಕಳ ತಾಯಿ ಶ್ರೀತಾಯಮ್ಮ ದೇವಿ ದೇವಸ್ಥಾನದಲ್ಲಿ 11 ದಿನಗಳ ಕಾಲ ಧಾರ್ಮಿಕ ಪೂಜೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರು ತಾಲೂಕಿನ ಮುಚ್ಚಳ ಕ್ಯಾಂಪ್‌ನಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಏಳು ಮಕ್ಕಳ ಶ್ರೀ ತಾಯಮ್ಮ ದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ಪುರೋಹಿತ ಬಳಗದ ವತಿಯಿಂದ ಅ.11 ರಿಂದ 21ರವರೆಗೆ ಬೆಳಿಗ್ಗೆ 6ಗಂಟೆಗೆ ರುದ್ರಾಭಿಷೇಕ, ಕುಂಕುಮಾರ್ಚನೆ, ಅಲಂಕಾರ, ಮತ್ತು ನೈವೇದ್ಯ, ಸಾಯಂಕಾಲ 6 ಗಂಟೆಗೆ ಲಕ್ಷ್ಮಿಗಣಪತಿಯ ಹೋಮ, ಮೃತ್ಯುಂಜಯ ಹೋಮ, ಚಂಡಿ ಹೋಮ, ಪ್ರತ್ಯಾಂಗರ ಹೋಮಗಳು ನಡೆದವು. ವಿಧಿ–ವಿಧಾನ ಧಾರ್ಮಿಕ ಪೂಜೆಯಲ್ಲಿ ಪ್ರತಿದಿನವೂ ಭಕ್ತಾಧಿಗಳು ಭಾಗವಹಿಸಿ, ಶ್ರೀತಾಯಮ್ಮ ದೇವಿಯ ಕೃಪೆಗೆ ಪಾತ್ರರಾಗಿದ್ದಾರೆ ಎಂದು ದೇವಸ್ಥಾನದ ಪೂಜಾರಿ ಮಂಜುನಾಥಸ್ವಾಮಿ ಹೇಳಿದರು.

ಏಳು ಮಕ್ಕಳ ಶ್ರೀ ತಾಯಮ್ಮ ದೇವಿಗೆ ವಿವಿಧ ಬಗೆಯ ಪುಷ್ಪಾಲಂಕಾರ ಮಾಡಲಾಗಿದ್ದು, ದೇವಸ್ಥಾನ ಸುತ್ತಲೂ ವಿದ್ಯುತ್ ದೀಪಗಳ ಅಲಂಕಾರದಿಂದ ನೋಡುಗರ ಕಣ್ಮನ ಸೆಳೆದು ಕಂಗೊಳಿಸಿ ದಸರಾ ಹಬ್ಬದ ಕಳೆ ಹೆಚ್ಚಿಸಿದೆ. ಸಾಯಂಕಾಲ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಶ್ರೀ ತಾಯಮ್ಮ ದೇವಿಗೆ ಭಕ್ತರು ವಿಶೇಷ ಕಾಣಿಕೆಗಳನ್ನು ಸಲ್ಲಿಸಿ, ಘೋಷಣೆಗಳ ಮೂಲಕ ಧಾರ್ಮಿಕ ಭಕ್ತಿ ಭಾವ ವ್ಯಕ್ತಪಡಿಸಿದರು.



ಸಂಸ್ಕೃತಿ, ಭಕ್ತಿ ಹಾಗೂ ಸಮೂಹ ಸಹಕಾರದ ಪ್ರತೀಕವಾಗಿ ಭಕ್ತರಲ್ಲಿ ಆಧ್ಯಾತ್ಮಿಕ ಉತ್ಸಾಹವನ್ನು ಮೂಡಿಸಿತು. ಭಜನೆ, ಹರಿಕಥೆ, ಮಹಾಪ್ರಸಾದ ಹಾಗೂ ದೇವಿಯ ಪಲ್ಲಕ್ಕಿ ಉತ್ಸವದ ವ್ಯವಸ್ಥೆ, ಅನ್ನಸಂತರ್ಪಣೆ ಭಕ್ತರು ಸುಸಜ್ಜಿತವಾಗಿ ಮಾಡಿದ್ದರು. ಮುಚ್ಚಳಕ್ಯಾಂಪ್ ಯುವಕರು, ಹಿರಿಯರು, ಮಹಿಳೆಯರು, ಮಕ್ಕಳು, ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಿ ಶರನ್ನವರಾತ್ರಿ ಹಬ್ಬದ 11 ದಿನಗಳ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ: ದೈಹಿಕ ಶಿಕ್ಷಕ ಕೆಂಚಪ್ಪ ಮೇಗಡೆ, ದೊಡ್ಡ ಆಂಜನೇಯ, ರಾಘವೇಂದ್ರ, ರಮೇಶಬಾಬು, ಅಮರೇಶ ಕೂಡ್ಲೂರುಮಠ, ಗವಿಸಿದ್ದಯ್ಯ ತಿಮ್ಮಾಪುರ, ಸಣ್ಣ ಆಂಜನೇಯ, ಮಲ್ಲಿಕಾರ್ಜುನ, ಸೇ–ರಿದಂತೆ ಗ್ರಾಮಸ್ಥರು ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾದರು.

ಉಪಕಾಲುವೆ ಕೊನೆ ಭಾಗದ ರೈತರಿಗೆ ಮರಣ ಶಾಸನ: ರೈತ ಮುಖಂಡ ಅಮೀನ್ ಪಾಷಾ ದಿದ್ದಿಗಿ ವಿಷಾಧ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಗಂಗಾವತಿ, ಸಿಂಧನೂರು, ಮಾನ್ವಿ ತಾಲೂಕಿನ ಪ್ರತಿ 200 ಕ್ಯೂಸೆಕ್ ನೀರನ್ನು ಕಡಿತಗೊಳಿಸಿ ಜಿಲ್ಲಾ ಕೇಂದ್ರ ರಾಯಚೂರಿಗೆ ತೆಗೆದುಕೊಂಡು ಹೋಗುವಂತದ್ದು, ಈಗಾಗಲೇ ಜಿಲ್ಲಾಧಿಕಾರಿಗಳಿಗೆ 1 ಸಾವಿರ ಕ್ಯೂಸೆಕ್ ನೀರು ಕಳ್ಳತನ ಆಗುತ್ತಿರುವುದು ಗೊತ್ತಿದೆ. ನೀರಾವರಿ ಅಧಿಕಾರಿಗಳು ಖುದ್ದಾಗಿ ಒಪ್ಪಿಕೊಂಡಿದ್ದಾರೆ. ಆದರೂ ಈ ಅಕ್ರಮವನ್ನು ತಡೆಯಲಿಕ್ಕೆ ಜಿಲ್ಲಾಧಿಕಾರಿಗಳು ಯಾಕೆ ಮುಂದಾಗಲಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನ್ ಪಾಷಾ ದಿದ್ದಿಗಿ ಪ್ರಶ್ನೆ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಅ.21 ಬುಧವಾರದಂದು ಸುದ್ದಿಗೋಷ್ಟಿ ನಡೆಸಿ ಮಾತನಾಡಿದರು, ರಾಯಚೂರಿಗೆ ನೀರು ತೆಗೆದುಕೊಂಡು ಹೋಗಿರುವುದಕ್ಕೆ ನಮ್ಮದು ಯಾವುದೇ ವಿರೋಧವಿಲ್ಲ. ಆದರೆ, ಅಕ್ರಮವಾಗಿ ನೀರನ್ನು ಬಳಕೆ ಮಾಡಿಕೊಳ್ಳುತ್ತಿರುವವರನ್ನು ಯಾಕೆ ತಡೆಯಲಿಲ್ಲ? ಉಪಕಾಲುವೆಗಳಿಂದ ಕನಿಷ್ಠ 500 ಮೀಟರ್ ಒಳಗೆ ಕೆರೆಗಳನ್ನು ನಿರ್ಮಿಸಿಕೊಳ್ಳಬಾರದು ಎಂಬ ರೂಲ್ ಇದ್ದರೂ ಕೂಡ ಉಪಕಾಲುವೆ ಪಕ್ಕದಲ್ಲಿ ಕೆರೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಜೊತೆಗೆ ಪಂಪ್ ಸೆಟ್ ಗಳಿವೆ, ಟ್ರಾನ್ಸ್ ಫರ್ ಗಳಿವೆ, ಇವು ಯಾವುದನ್ನು ತಡೆದಿಲ್ಲ. ಅಧಿಕಾರಿಗಳು ಕಡಿವಾಣ ಹಾಕಲಿಲ್ಲ.

ಅಧಿಕಾರಿಗಳು ಅಕ್ರಮದ ಪರವಾಗಿದ್ದಾರೋ ಅಥವಾ ಸಕ್ರಮದ ಪರವಾಗಿದ್ದಾರೋ ಎಂಬುದನ್ನು ಜಿಲ್ಲಾಡಳಿತ ತಿಳಿಸಬೇಕು. ಕೊನೆಯ ಭಾಗದ ರೈತರು ಜೋಳ ಬಿತ್ತನೆ ಮಾಡಿದ್ದಾರೆ, ಇದುವರೆಗೂ ನೀರು ತಲುಪಿಲ್ಲ, ಅವರಿಗೆ ಒಂದು ತಿಂಗಳಾದರೂ ನೀರು ಕೊಡಿ, ಇಲ್ಲ ಎಂದರೆ ರೈತರು ವಲಸೆ ಹೋಗುವಂತಹ ಪರಿಸ್ಥಿತಿ ಬರುತ್ತದೆ. ಮೊನ್ನೆ ನಡೆದ ನೀರಾವರಿ ಸಲಹಾ ಸಮಿತಿಯಲ್ಲಿ ಕೆಲವರು ಅಕ್ರಮದ ಬಗ್ಗೆ ಈಗ ಮಾತನಾಡುವುದು ಬೇಡ, ಈಗ ಸಧ್ಯಕ್ಕೆ ಸರಿಪಡಿಸಲಿಕ್ಕೆ ಆಗುವುದಿಲ್ಲ. ಆಮೇಲೆ ನೋಡೋಣ ಎಂದರಂತೆ, ಅಲ್ಲ ಸ್ವಾಮಿ ನೀರು ಇದ್ದಾಗಲೆ ಕಳ್ಳತನ ಆಗುವುದು ನೀರು ಇಲ್ಲದಿದ್ದಾಗ ಕಳ್ಳತನ ಹೇಗೆ ಆಗುತ್ತೆ, ನೀವು ಆವಾಗ ಏನು ಕ್ರಮ ಜರುಗಿಸುತ್ತೀರಾ? ಎಂದು ಅಧಿಕಾರಿಗಳ ವಿರುದ್ಧ ಹರಿಹಾಯ್ದರು.



100ಕ್ಕೆ 90ರಷ್ಟು ಅಕ್ರಮ ನಡೆದಿದೆ. ರೈತರಿಗೆ ಬದುಕು ಕಟ್ಟಿಕೊಡುವ ರಾಜಕಾರಣ ಮಾಡಿ, ನವೆಂಬರ್ 20ರ ತನಕ ನೀರು ಕೊಡುತ್ತೀವಿ ಎಂದಿದ್ದಾರೆ. ಆದರೆ ರೈತರ ಮನವಿ ಏನೆಂದರೆ, ಕನಿಷ್ಠ ಡಿಸೆಂಬರ್ 31ರವರೆಗೆ ನೀರು ಕೊಡಿ ಉಳಿದ ಬೆಳೆಗಳನ್ನಾದರೂ ಬದುಕಿಸಿ ಕೊಳ್ಳುತ್ತೇವೆ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ: ಜಿಲ್ಲಾ ಅಧ್ಯಕ್ಷ ಬಸವರಾಜ ಹಂಚಿನಾಳ, ಶಾಂತಕುಮಾರ ಹೆಡಗಿನಾಳ, ಇಸ್ಮಾಯಿಲ್, ತಾಜಾವುದ್ದೀನ್ ಹೆಡಗಿನಾಳ, ಶಿವನಗೌಡ ಗುಡುದೂರು, ಮಲ್ಲಿಕಾರ್ಜುನ, ದುರುಗಪ್ಪ, ಯೂಸುಫ್ ಸಾಬ್ ಕುನ್ನಟಗಿ, ಸೇರಿದಂತೆ ಅನೇಕ ರೈತ ಸಂಘಟನೆಯ ಮುಖಂಡರಿದ್ದರು.

ವಿಜಯದಶಮಿ ಪ್ರಯುಕ್ತ ಬನ್ನಿ ವೃಕ್ಷಕ್ಕೆ ಮಹಿಳೆಯರಿಂದ ವಿಶೇಷ ಪೂಜೆ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಕಡೇಕೊಪ್ಪ ಗ್ರಾಮದಲ್ಲಿ ವಿಜಯದಶಮಿ ಹಬ್ಬದ ಪ್ರಯುಕ್ತ ಮಹಿಳೆಯರು ಬನ್ನಿ (ಶಮೀ) ವೃಕ್ಷಕ್ಕೆ ವಿಶೇಷ ಪೂಜೆ ಸಲ್ಲಿಸಿ, ಸಂಪ್ರದಾಯಬದ್ಧವಾಗಿ ಉಡಿ ತುಂಬುವ ಕಾರ್ಯಕ್ರಮವನ್ನು ನೆರವೇರಿಸಿದರು.



ವಿಜಯದಶಮಿಯ ಅಂಗವಾಗಿ ಬನ್ನಿ ವೃಕ್ಷಕ್ಕೆ ಪೂಜೆ ಸಲ್ಲಿಸಿ, ಕುಟುಂಬದ ಸುಖ, ಶಾಂತಿ, ಸಮೃದ್ಧಿ ಹಾಗೂ ಎಲ್ಲರಿಗೂ ಉತ್ತಮ ಮಳೆ–ಬೆಳೆಯಾಗಲಿ ಎಂದು ಪ್ರಾರ್ಥಿಸಿದರು. ಹಬ್ಬದ ಸಂಭ್ರಮದಲ್ಲಿ ಮಹಿಳೆಯರು ಒಟ್ಟಾಗಿ ಪಾಲ್ಗೊಂಡು ಸಂಪ್ರದಾಯವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಕವಿತಾ ಹಿರೇಮಠ, ಸಂಗೀತ ಕಿಲ್ಲೇದ ಮಠ, ರೇಖಾ ಹಿರೇಮಠ, ಮಂಜುಳಾ ಹರಿ–ಜನ, ಜ್ಯೋತಿ, ಹುಲಗವ್ವ, ಭೂಮಿಕಾ ಹಾಗೂ ಕೃತಿ–ಕಾ ಸೇರಿದಂತೆ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಅಕ್ರಮ ಮದ್ಯ ಮಾರಾಟ, ಜೂಜಾಟಕ್ಕೆ ಬ್ರೇಕ್: ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಡಿವೈಎಸ್‌ಪಿ ಸುಲೇಮಾನ್ ತಹಶೀಲ್ದಾರ್ ಖಡಕ್ ಸೂಚನೆ!

ಶಾಲಾ–ಕಾಲೇಜುಗಳ ಬಳಿ ವಿದ್ಯಾರ್ಥಿನಿಯರ ಸುರಕ್ಷತೆಗೆ ಆದ್ಯತೆ; ಅಕ್ರಮ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ತಾಲೂಕಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದರ ಜತೆಗೆ ಸಾರ್ವಜನಿಕರ ಕುಂದುಕೊರತೆಗಳಿಗೆ ತಕ್ಷಣ ಸ್ಪಂದಿಸಿ, ಸೂಕ್ತ ಪರಿಹಾರ ಕಲ್ಪಿಸಲು ಪೊಲೀಸ್ ಇಲಾಖೆ ಬದ್ಧವಾಗಿದೆ ಎಂದು ಲಿಂಗಸುಗೂರು ಉಪವಿಭಾಗದ ಡಿವೈ–ಎಸ್‌ಪಿ ಸುಲೇಮಾನ್ ತಹಶೀಲ್ದಾರ್ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಭಾನುವಾರ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ, ಎಸ್‌ಟಿ) ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ' ಎಂಬ ತತ್ವಗಳು ಸಮಾಜದ ಪ್ರಗತಿಗೆ ದಾ–ರಿದೀಪವಾಗಿವೆ. ಆದರೆ, ಇಂದಿಗೂ ಅನೇಕರು ಶಿಕ್ಷಣದಿಂದ ವಂಚಿತರಾಗಿ ಅಜ್ಞಾನ ಮತ್ತು ದುಶ್ಚಟಗಳಿಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಶಾಲಾ–ಕಾಲೇಜುಗಳ ಬಳಿ ಪೊಲೀಸ್ ಬೀಟ್ ವ್ಯವಸ್ಥೆ ಶಾಲಾ–ಕಾಲೇಜುಗಳ ಸುತ್ತಮುತ್ತ



ವಿದ್ಯಾರ್ಥಿನಿಯರಿಗೆ ತೊಂದರೆ ನೀಡುವ ಪುಂಡರ ಹಾವಳಿಯನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿನಿಯರ ಸುರಕ್ಷತೆಗೆ ಆದ್ಯತೆ ನೀಡುವ ಉದ್ದೇಶದಿಂದ ಶಾಲಾ–ಕಾಲೇಜುಗಳ ಬಳಿ ಕಟ್ಟುನಿಟ್ಟಿನ ಪೊಲೀಸ್ ಬೀಟ್ ವ್ಯವಸ್ಥೆ ಜಾ–ರಿಗೊಳಿಸಲಾಗುವುದು ಎಂದು ತಿಳಿಸಿದರು.

ಅಕ್ರಮ ಮದ್ಯ ಮಾರಾಟಗಾರರಿಗೆ ಎಚ್ಚರಿಕೆ ಕಿರಾಣಿ ಅಂಗಡಿಗಳು ಹಾಗೂ ಪೆಟ್ಟಿ ಅಂಗಡಿಗಳಲ್ಲಿ ಕಾನೂನುಬಾಹಿರವಾಗಿ ಮದ್ಯ ಮಾರಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಡಿವೈಎಸ್‌ಪಿ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ದಲಿತ ಸಂಘಟನೆಗಳ ಮುಖಂಡರು ಮಾತನಾಡಿ, ತಾಲೂಕಿನಲ್ಲಿ ಇಸ್ಪೀಟ್ ಜೂಜಾಟ, ಮಟ್ಕಾ ಹಾಗೂ ಗಲ್ಲಿಗಲ್ಲಿಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟದಿಂದ ಬಡ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ಇಂತಹ ಅಕ್ರಮ ಚಟುವಟಿ–ಕೆಗಳಿಗೆ ತಕ್ಷಣ ಕಡಿವಾಣ ಹಾಕಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಮನವಿ ಮಾಡಿದರು.

ಪೊಲೀಸ್ ಅಧಿಕಾ–ರಿಗಳು, ಮುಖಂಡರು ಭಾಗಿ ಸಭೆಯಲ್ಲಿ ಪೊಲೀಸ್ ಅಧಿಕಾರಿಗಳಾದ ಪುಂಡಲಿಕ್ ಪಟ್ಟೇತಾರ್, ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ್, ಪ್ರೊಬೇಷನರಿ ಸಿಪಿಐ ಹಸೀನಾ ಬೇಗಂ, ಪಿಎಸ್‌ಐ ರಾಮನಾಥ–ರೆಡ್ಡಿ ಸೇರಿದಂತೆ ಹನುಮಂತ ಮನ್ನಾಪೂರಿ, ಮಹಾಂತೇಶ ಭವಾನಿ, ಬಸವರಾಜ ಅಕ್ಕರಕಿ, ವಿಶ್ವನಾಥ ಬಲ್ಲಿದವ, ರವಿ ಅಕ್ಕರಕಿ, ನರಸಣ್ಣ ನಾಯಕ, ಮರಿಲಿಂಗ ಮಾರುತಿ ನಾಯಕ, ಹನುಮಂತ್ರಾಯ ದೊರೆ, ನಾಗಪ್ಪ ನಾಡದಾಳ, ಗುಂಡಪ್ಪ ನಾಯಕ ಹಾಗೂ ಹನುಮಂತ್ರಾಯ ನಾಯಕ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು, ಗ್ರಾಮಸ್ಥರು ಮತ್ತು ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

ಮಾನಸಿಕ ಆರೋಗ್ಯ ಸೇವೆಯನ್ನು ಪಡೆಯಲು ಯಾರು ಹಿಂದೇಟು ಹಾಕಬಾರದು.

ಉಚಿತ ಚಿಕಿತ್ಸೆ ಹಾಗೂ ಆಪ್ತಸಮಾಲೋಚನೆ ಸೇವೆ ಪಡೆಯಿರಿ:ಡಾ ನಂದಿತಾ ಎಮ್ ಎನ್.

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ವ್ಯಕ್ತಿಯಲ್ಲಿ ಪದೇ ಪದೇ ಎದುರಾಗುವ ತೀವ್ರ ಸಂಕಷ್ಟಗಳು, ಅತಿಯಾದ ಮಾನಸಿಕ ಒತ್ತಡ ಹಾಗೂ ಮಿತಿಮೀರಿದ ಆಲೋಚನೆಗಳಿಂದ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆರಂಭಿಕ ಹಂತದಲ್ಲಿಯೇ ರೋಗಿಯ ಮನಃಸ್ಥಿತಿಯನ್ನು ಅರ್ಥೈಸಿಕೊಂಡು, ಕುಟುಂಬದ ಸದಸ್ಯರ ಸಹಕಾರ ಮತ್ತು ಪ್ರೀತಿಯೊಂದಿಗೆ ಸೂಕ್ತ ಚಿಕಿತ್ಸೆ ಕೊಡಿಸಿದರೆ ಕಾಯಿಲೆಯನ್ನು ಬೇಗನೆ ಗುಣಪಡಿಸಬಹುದು, ಈ ದಿಸೆಯಲ್ಲಿ ಸೇವೆ ಪಡೆಯಲು ಯಾರು ಹಿಂದೇಟು ಹಾಕಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.

ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ, ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿಗಳ ಸಭಾಂಗಣದಲ್ಲಿ 'ವಿಶ್ವ ಮಾನಸಿಕ



ಆರೋಗ್ಯ ದಿನಾಚರಣೆ–2026' ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಸಾಮಾನ್ಯವಾಗಿ ಮಾನಸಿಕ ರೋಗಿಗಳನ್ನು ಮನೆಯಲ್ಲಿ ಇರಿಸಿಕೊಳ್ಳುವುದು ಅಪಾಯಕಾರಿ ಎಂಬ ತಪ್ಪು ಕಲ್ಪನೆ ಇತ್ತು. ಆದರೆ ಕಳೆದ ಮೂರು ದಶಕಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆದ ಅಭೂತಪೂರ್ವ ಸಂಶೋಧನೆಗಳು ಮತ್ತು ಸುಧಾರಿತ ಚಿಕಿತ್ಸಾ ಪದ್ಧತಿಗಳಿಂದಾಗಿ ರೋಗಿಗಳಿಗೆ ಮನೆಯಲ್ಲಿಯೇ ಆರೈಕೆ ಹಾಗೂ ಚಿಕಿತ್ಸೆ ನೀಡಲು ಸಾಧ್ಯವಿದೆ. ಪ್ರತಿಯೊಬ್ಬರಿಗೂ ಸೂಕ್ತ ಚಿಕಿತ್ಸೆ ಲಭ್ಯವಿದ್ದು, ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವ ಮೂಲಕ ಇಂತಹ ಸಮಸ್ಯೆಗಳಿಂದ ಹೊರಬರಬಹುದು ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಕಾರ್ಯಕ್ರಮ ಅಧಿಕಾರಿ ಡಾ ಶಿವಕುಮಾರ ನಾರಾ ಮಾತನಾಡಿ, ವಿವಿಧ ವೃತ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಪ್ರತಿಯೊಬ್ಬರೂ ಕರ್ತವ್ಯ ನಿರ್ವಹಣೆಗಾಗಿ ಅನಗತ್ಯ ಒತ್ತಡ ಹಾಗೂ ಖಿನ್ನತೆಗೆ ಒಳಗಾಗಬಾರದು. ಯಾವುದೇ ಮಾನಸಿಕ ಸಮಸ್ಯೆ ಅಥವಾ ಸಂಕಷ್ಟಗಳಿದ್ದಾಗ ಮುಕ್ತವಾಗಿ ಸಹೋದ್ಯೋಗಿಗಳೊಂದಿಗೆ ಮನದಾಳದಲ್ಲಿಯ ಮಾತುಗಳನ್ನು ಹಂಚಿಕೊಂಡು ಮಾನಸಿಕವಾಗಿ ಸದೃಢರಾಗಬೇಕು ಎಂದರು.

ಮನೋರೋಗ ತಜ್ಞ ಡಾ ಮನೋಹರ ಪತ್ತಾರ, ಈ ವರ್ಷದ ಘೋಷ ವಾಕ್ಯವಾದ "ಅನುಭವದ ಧ್ವನಿ ಬದಲಾವಣೆಯ ಶಕ್ತಿ" ಎಂಬ ಹಿನ್ನಲೆಯಡಿ ಮಾತನಾಡುತ್ತಾ, ಸಾಮಾನ್ಯವಾಗಿ 15 ರಿಂದ 25 ವರ್ಷದ ಯುವ ಜನತೆಯಲ್ಲಿ ಗ್ರಾಮೀಣ–ನಗರ ಅಥವಾ ಬಡವ–ಶ್ರೀಮಂತ ಎಂಬ ಭೇದವಿಲ್ಲದೆ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಇದಕ್ಕಾಗಿ ಉಚಿತ ಆಪ್ತ ಸಮಾಲೋಚನೆ ಮತ್ತು ಔಷಧೋಪಚಾರಗಳು ಲಭ್ಯವಿವೆ.

ಸಾರ್ವಜನಿಕರು ಯಾವುದೇ ಸಂದರ್ಭದಲ್ಲೂ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಟೆಲಿ–ಮನಸ್ ಉಚಿತ ಸಹಾಯವಾಣಿ 14416 ಸಂಖ್ಯೆಗೆ ಕರೆ ಮಾಡಿ ಸೂಕ್ತ ಮಾಹಿತಿ ಹಾಗೂ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಿದರು. ಅಲ್ಲದೆ ಮಾನಸಿಕ ಸಮಸ್ಯೆಯು ವ್ಯಕ್ತಿಯ ಆಲೋಚನೆ, ಭಾವನೆ ಹಾಗೂ ಗ್ರಹಿಕೆಯನ್ನು ಬಾಧಿಸುತ್ತದೆ. ಕಾರಣವಿಲ್ಲದೆ ಅತಿಯಾದ ಕೋಪ, ದುಃಖ, ಅತಿಯಾದ ನಗು ಅಥವಾ ಅಳು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಲಕ್ಷಣಗಳು ಕಂಡ ಕೆಲವೇ ವಾರಗಳಲ್ಲಿ ಮಾತ್ರೆ ಅಥವಾ ಚುಚ್ಚುಮದ್ದಿನ ಚಿಕಿತ್ಸೆ ಆರಂಭಿಸಿದರೆ ಕಾಯಿಲೆಯನ್ನು ಶೀಘ್ರವೇ ನಿಯಂತ್ರಿಸಬಹುದು.

ಪ್ರಸ್ತುತ "ಮನೋಚೈತನ್ಯ" ಕಾರ್ಯಕ್ರಮದಡಿ ಪ್ರತಿ ಮಂಗಳವಾರ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ ನಡೆಸಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಯ ಕುರಿತು ಪ್ರತಿಜ್ಞಾವಿಧಿ ಬೋಧಿಸಿ ಬಿತ್ತಿ ಪತ್ರ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಅಮರೇಶ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸುನೀಲ್ ಹೆಚ್, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗದ ಸೈಕಾಲಜಿಸ್ಟ್ ಅರುಣ್ ಕುಮಾರ್, ಪಿಎಸ್‌ಡಬ್ಲ್ಯು ದೀಪಾ ಎಸ್ ಎಲ್, ಪಿಎಸ್–ಎನ್ ಗಂಗಮ್ಮ, ಪಿಎಸ್‌ಡಬ್ಲ್ಯು ಮಂಜುಳಾ, ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾ–ರಿಗಳು ಹಾಗೂ ಸಿಬ್ಬಂದಿಯರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

DHFWS ಹಾಸನ ನೇಮಕಾತಿ 2026 ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ (Multi Purpose Worker) ಮತ್ತು ಫಾರ್ಮಸಿಸ್ಟ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅಕ್ಟೋಬರ್ 20, 2026

DHFWS ಹಾಸನ ನೇಮಕಾತಿ 2026: ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳ ಒಟ್ಟು 24 ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (DHFWS) ಹಾಸನವು, ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ ಹಾಸನದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: hassan.nic.in

ಅ. 24, 25ರಂದು ಚಾಮರಾಜನಗರದಲ್ಲಿ ಎರಡನೇ ಅಂತರಾಷ್ಟ್ರೀಯ ಬೌದ್ಧ ಸಮ್ಮೇಳನ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಚಾಮರಾಜನಗರದಲ್ಲಿ ಅಕ್ಟೋಬರ್ 24 ಮತ್ತು 25ರಂದು ನಡೆಯಲಿರುವ ಎರಡನೇ ಅಂತರಾಷ್ಟ್ರೀಯ ಬೌದ್ಧ ಸಮ್ಮೇಳನದಲ್ಲಿ ರಾಯಚೂರು ಜಿಲ್ಲೆಯಿಂದ ಸಾವಿರಕ್ಕೂ ಹೆಚ್ಚು ಬೌದ್ಧ ಹಾಗೂ ಅಂಬೇಡ್ಕರ್ ಅನುಯಾಯಿಗಳು ಭಾಗವಹಿಸಲಿದ್ದಾರೆ ಎಂದು ಮಾನ್ವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ದಮ್ಮ ಉಪಾಸಕರು ತಿಳಿಸಿದರು.

ವಕೀಲ ದತ್ತಾತ್ರೇಯ ಹಿರೇಕೊಟ್ನೆಕಲ್ ಮಾತನಾಡಿ, ದೇಶದಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಸಲು ಬುದ್ಧನ ವಿಚಾರಗಳು ಅಗತ್ಯವಾಗಿದ್ದು, ಮಾನ್ವಿ ಮತ್ತು ಸಿರವಾರ ತಾಲೂಕಿನ ಬೌದ್ಧ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಮ್ಮೇಳನದಲ್ಲಿ



ಭಾಗವಹಿಸಬೇಕು ಎಂದು ಮನವಿ ಮಾಡಿದರು. ವಕೀಲ ಹನುಮಂತರಾಯ ಕಪಗಲ್ ಮಾತನಾಡಿ, ಸಮ್ಮೇಳನದ ಮೂಲಕ ಬುದ್ಧನ ತತ್ವಾದರ್ಶಗಳು ಹಾಗೂ ಬೌದ್ಧ ಧಮ್ಮದ ವಿಚಾರಗಳನ್ನು ಪ್ರಚಾರ ಮಾಡುವ ಉದ್ದೇಶ ಹೊಂದಲಾಗಿದೆ. ರಾಯಚೂರು ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬುದ್ಧನ ಚಿಂತನೆಗಳನ್ನು ತಿಳಿದುಕೊಳ್ಳಲಿದ್ದೇವೆ ಎಂದರು.

ಲಕ್ಷ್ಮಣ್ ಜಾನೇಕಲ್ ಮಾತನಾಡಿ, ಸಮ್ಮೇಳನದಲ್ಲಿ ಬೌದ್ಧ ಸಾಹಿತ್ಯ, ಬೌದ್ಧರ ಇತಿಹಾಸ ಸೇರಿದಂತೆ ವಿವಿಧ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ. ಜಿಲ್ಲೆಯ ಬೌದ್ಧ ಹಾಗೂ ಅಂಬೇಡ್ಕರ್ ಅನುಯಾಯಿಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು ಎಂದು ಕೋರಿದರು. ಅಮರೇಶ ನಂದಿಹಾಳ ಮಾತನಾಡಿ, ರಾಯಚೂರು ಜಿಲ್ಲೆಯಿಂದ ಮಹಿಳೆಯರು, ಮಕ್ಕಳು, ಹಿರಿಯರು ಹಾಗೂ ಬೌದ್ಧ ಚಿಂತಕರು ಸೇರಿದಂತೆ ಸಾವಿರಕ್ಕೂ ಹೆಚ್ಚು ಜನರು ರೈಲು ಮತ್ತು ಬಸ್ಸುಗಳ ಮೂಲಕ ಸಮ್ಮೇಳನದಲ್ಲಿ ಭಾಗವಹಿಸಲು ತೆರಳಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಕೀಲ ತಿಪ್ಪಣ್ಣ ಬಾಗಲವಾಡ, ನರಸಪ್ಪ ಜೂಕುರ್, ಹನುಮಂತ ಉದ್ಬಾಳ, ಹನುಮಂತ ಸೀಕಲ್, ಮೌನೇಶ ಕೋರಿ, ಶ್ರೀನಿವಾಸ್, ಜಗದೀಶ್, ಶಂಕರ್ ಜಾನೇಕಲ್, ನಾಗರೆಡ್ಡಿ ಸೀಕಲ್, ಬಸವರಾಜ್ ಜಾನೇಕಲ್, ನರಸಿಂಹ ಗೋರ್ಕಲ್, ವಕೀಲ ಮಲ್ಲಿಕಾರ್ಜುನ, ನರಸಿಂಹ ಸೀಕಲ್, ಸುರೇಶ್ ಬೈಲ್ ಮರ್ಚೆಡ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೆರೆಗೆ ಬಿದ್ದ ಕಾರು : ಮೂವರ ಸಾವು

❏ ನೈಜ್ಯ ದೆಸೆ ನ್ಯೂಸ್

ಮಡಿಕೇರಿ: ಕೆರೆ ಬದಿಯ ರಸ್ತೆಯಲ್ಲಿ ಸಾಗುತ್ತಿದ್ದ ಕಾರು ನಿಯಂತ್ರಣ ಕಳೆದುಕೊಂಡ ಕೆರೆಗೆ ಬಿದ್ದ ಪರಿಣಾಮ ಒಂದೇ ಕುಟುಂಬದ ಮೂವರು ದಾರುಣವಾಗಿ ಸಾವನ್ನಪ್ಪಿರುವ ಘಟನೆ ಮಾಲ್ದಾರೆ ವ್ಯಾಪ್ತಿಗೆ ಒಳಪಡುವ ಬಾಡಗ ಬಾಣಂಗಾಲ ಶಿಲ್ಪಿ ಎಸ್ಟೇಟ್ ನಲ್ಲಿ ನೆನ್ನೆ ರಾತ್ರಿ ನಡೆದಿದೆ.



ಘಟನೆಯಲ್ಲಿ ಸಿದ್ದಾಪುರ ಹೈಸ್ಕೂಲ್ ಪೈಸಾರಿ ನಿವಾಸಿ ವಿಜೇಶ್ (36), ಆವರ ಪತ್ನಿ ಪಮಿತ (34) ಹಾಗೂ ಮಗು ಲಿಯ (4) ಈ ದುರಂತದಲ್ಲಿ ಮೃತ ಪಟ್ಟ ದುರ್ದೈವಿಗಳಾಗಿದ್ದಾರೆ. ಇವರುಗಳು ನೆನ್ನೆ ರಾತ್ರಿ ಸಿದ್ಧಾಪುರಕ್ಕೆ ಬಂದವರು ದೊಡ್ಡ ಮಗಳನ್ನು ನೆಂಟರ ಮನೆಯಲ್ಲಿ ಬಿಟ್ಟು ಬಾಣಂಗಾಲದಲ್ಲಿರುವ ತೋಟದ ವಸತಿ ಗೃಹಕ್ಕೆ ಹಿಂತಿರುಗುತ್ತಿದ್ದರು. ತೋಟದ ನಡುವೆ ಇರುವ ಕೆರೆಯ ಏರಿ ಮೇಲಿನ ರಸ್ತೆ ಮೇಲೆ ಕಾರು ಚಲಿಸುತ್ತಿದ್ದಾಗ ಒಂದು ಟಯರ್ ಏರಿಯಿಂದ ಜಾರಿದ ಪರಿಣಾಮ ಕಾರು ಅನಾಮತ್ತಾಗಿ ಕೆರೆಯೊಳಗೆ ಜಾರಿ ಬಿದ್ದಿದೆ ಎಂದು ಹೇಳಲಾಗಿದೆ. ಕತ್ತಲಾದ್ದರಿಂದ ವಿಷಯ ಯಾರಿಗೂ ಅರಿಯಲಾಗದೆ ಸಹಾಯಕ್ಕೆ ಯಾರೂ ಧಾವಿಸಲಾಗಿರಲಿಲ್ಲ. ಇಂದು ಬೆಳಿಗ್ಗೆ ಕಾರ್ಮಿಕರು ಕೆರೆಯಲ್ಲಿ ಮುಳುಗಿದ್ದ ಕಾರನ್ನು ಕಂಡಿದ್ದು, ಅದರ ಒಳಗೆ ಈ ಮೂವರು ಉಸಿರು ಚೆಲ್ಲಿರುವುದು ಗೋಚರಿಸಿದೆ. ಬಳಿಕ ಮೃತ ದೇಹಗಳನ್ನು ಮೇಲಕ್ಕೆ ತೆಗೆದು ಸಿದ್ದಾಪುರ ಆಸ್ಪತ್ರೆಗೆ ಸಾಗಿಸಲಾಯಿತು.

ಈ ದಂಪತಿ ಬಾಣಂಗಾಲಕ್ಕೆ ಹಿಂತಿ–ರುಗುವ ಸಂದರ್ಭದಲ್ಲಿ ತಮ್ಮ ಹಿರಿಯ ಪುತ್ರಿಯನ್ನು ಸಿದ್ದಾಪುರದಲ್ಲಿರುವ ನೆಂಟರ ಮನೆಯಲ್ಲಿ ಬಿಟ್ಟು ಹೋಗಿದ್ದ–ರಿಂದ ಈ ಮಗುವಿನ ಜೀವ ಉಳಿದಿದೆ. ಇಲ್ಲವಾಗಿದ್ದಲ್ಲಿ ಈ ದುರಂತದಲ್ಲಿ ಜೀವಕ್ಕೆ **ಅಪಾಯ ಉಂಟಾಗುವ ಸಾಧ್ಯತೆಯಿತ್ತು.**

ಆಯುಧ ಪೂಜೆ ವಿಜಯದಶಮಿ ದಸರಾ ಹಬ್ಬದ ಪ್ರಯುಕ್ತ ಕಡಕೋಳ ಬಿಕೆಟಿ ಪಬ್ಲಿಕ್ ಶಾಲೆಯಲ್ಲಿ ಬೀರೇಶ್ವರ ಸ್ವಾಮಿ ಮತ್ತು ಕಾಳಮ್ಮ ಟ್ರಸ್ಟಿನ ವತಿಯಿಂದ ಪೌರಕಾರ್ಮಿಕರಿಗೆ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಆಯುಧ ಪೂಜೆ ವಿಜಯದಶಮಿಯ ಹಾಗೂ ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ತಾಲೂಕು ಕಡಕೋಳ ಗ್ರಾಮದ ಕಾಳಮ್ಮ ಬೀರೇಶ್ವರ ಸ್ವಾಮಿ ಟ್ರಸ್ಟಿನ ವತಿಯಿಂದ ಕಡಕೋಳ ಬಿಕೆಟಿ ಪಬ್ಲಿಕ್ ಶಾಲೆಯ ವನದಲ್ಲಿ ಶಾಲೆಯ ಸಂಸ್ಥಾಪಕ ಬಿ ನಾಗರಾಜ್ ರವರ ನೇತೃತದಲ್ಲಿ ಕಡಕೋಳ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುವ ಎಲ್ಲಾ ಪೌರಕಾರ್ಮಿಕರಿಗೆ ಸಮವಸ್ತ್ರ ಸಿಹಿ ವಿತರಿಸಿ ಸನ್ಮಾನಿಸಿ ಗೌರವಿಸಿದರು ಸನ್ಮಾನಿಸಿ ಗೌರವಿಸಿ ಮಾತನಾಡಿದ ಬಿಕೆಟಿ ಪಬ್ಲಿಕ್ ಶಾಲೆಯ ಸಂಸ್ಥಾಪಕ ಹಾಗೂ ಕಾಳಮ್ಮ ಬೀರೇಶ್ವರ ಸ್ವಾಮಿ ಟ್ರಸ್ಟಿನ ಅಧ್ಯಕ್ಷರಾದ ಬಿ ನಾಗರಾಜ್ ರವರು ಪೌರಕಾರ್ಮಿಕರು ನಿಮ್ಮಂತೆ ಅವರು ಕೂಡ ಅವರು ನಮ್ಮ ಗ್ರಾಮಗಳ ಸ್ವಚ್ಛತೆ



ಕಾರ್ಯದಲ್ಲಿ ತೊಡಗಿ ಸ್ವಚ್ಛತೆ ಮಾಡುವ ಮೂಲಕ ಗ್ರಾಮಗಳಲ್ಲಿ ಬರುವಂಥ ವೈರಾಣು ರೋಗಗಳನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ

ಅವರಿಗೆ ನಮ್ಮ ಸಂಸ್ಥೆ ವತಿಯಿಂದ ಸಣ್ಣದಾಗಿ ಒಂದು ಗೌರವ ಸಮರ್ಪಣೆಯನ್ನು ಮಾಡುತ್ತಿದ್ದೇವೆ ಅವರು ಕೂಡ ನಮ್ಮಂತೆ ನಾವು ಕೂಡ ಅವರಂತೆ ಎಂದು ಭಾವಿಸಿ ಅವರಿಗೆ ನಾವು ಇವತ್ತು ಸನ್ಮಾನಿಸಿ ಗೌರವಿಸಿದ್ದೇವೆ ಎಂದು ಬಿ ನಾಗರಾಜ್ ರವರು ಹೇಳಿದರು ಪೌರಕಾರ್ಮಿಕರ ಸಂಘದ ಅಧ್ಯಕ್ಷ ಆನಂದ್ ರವರು ಮಾತನಾಡಿ ಬಿಕೆಟಿ ಪಬ್ಲಿಕ್ ಶಾಲೆಯ ಸಂಸ್ಥಾಪಕರಾದ ನಾಗರಾಜ್ ರವರು ಮತ್ತು ಅವರ ತಂಡದವರು ಪ್ರತಿವರ್ಷನೂ ವಿಜಯದಶಮಿ ಹಬ್ಬದ ಪ್ರಯುಕ್ತ ನಮ್ಮ ಪೌರಕಾರ್ಮಿಕರಿಗೆ ಅವರ ಕೈಲಾದ ಮಟ್ಟಿಗೆ ಸಮಸ್ತ ನೀಡಿ ಸಿಹಿ ವಿತರಿಸಿ ಸನ್ಮಾನಿಸಿ ವಿನೂತನವಾಗಿ ವಿಶೇಷವಾಗಿ ನಮ್ಮ ಪೌರಕಾರ್ಮಿಕರನ್ನು ಗೌರವ ಮತ್ತು ಸನ್ಮಾನಿಸುತ್ತಿರುವುದಕ್ಕೆ ನಾವು ಅವರಿಗೆ ಆಭಾರಿಯಾಗಿದ್ದೇವೆ ಎಂದು ತಿಳಿಸಿದರು ಇದೆ ವೇಳೆ ಆಯುಧ ಪೂಜೆ ಪ್ರಯತ್ನ ಶಾಲೆಯ ಶಾಲಾ ಮಕ್ಕಳ ವಾಹನಗಳಿಗೆ ಪೂಜೆ ಸಲ್ಲಿಸಿ ಶಾಲೆಯ ಶಿಕ್ಷಕರು ಸಿಬ್ಬಂದಿ ವರ್ಗದವರಿಗೆ ಸಿಹಿತರಿಸಿದರು.

ಈ ಸಂದರ್ಭದಲ್ಲಿ ಬಿ ಕೆ ಟಿ ಪಬ್ಲಿಕ್ ಶಾಲೆ, ಹಾಗೂ ಬೀರೇಶ್ವರ ಸ್ವಾಮಿ ಮತ್ತು ಕಾಳಮ್ಮ ಟ್ರಸ್ಟಿನ ಅಧ್ಯಕ್ಷರು, ಆದ ಬಿ ನಾಗರಾಜ್ ರವರು ಹಾಗೂ ನಂಜುಂಡೇಗೌಡ, ಕೃಷ್ಣಪ್ಪ, ಕೆಟಿ ಶಿವಣ್ಣ, ಸಿದ್ದರಾಮೇಗೌಡ, ಕೆಂಪೇಗೌಡ, ಖಜಾಂಚಿ ಈರಪ್ಪ, ಖಜಾಂಚಿ ಕಾಳಪ್ಪ, ಈರಪ್ಪ, ಮಾಲೆಗೌಡರು, ಸಿದ್ದಪ್ಪ, ಚಂದ್ರಶೇಖರ್, ಮಹದೇವು, ರಾಕೇಶ್ ಕುಮಾರ್, ಸಿದ್ದರಾಜು, ವಿಶ್ವನಾಥ್, ರವೀಂದ್ರ, ಚಿಕ್ಕ ಪುಟ್ಟ, ಶಿವಬೀರ, ದೊಡ್ಡ ರಾಮೇಗೌಡ, ಮಂಜುನಾಥ್, ಹುಚ್ಚೇಗೌಡ, ಶಿವಕುಮಾರ, ಹುಚ್ಚಪ್ಪ, ರಾಜು, ಜಯಕುಮಾರ್, ಜಯಪ್ಪ, ಮಹದೇವು ಸೋಮಲಿಂಗ, ಚನ್ನಬಸವ, ಚಿಕ್ಕ ಬೀರಪ್ಪ, ಮುಖ್ಯ ಶಿಕ್ಷಕರಾದ ಕುಮಾರಸ್ವಾಮಿ, ಹಾಗೂ ಶಾಲೆಯ ಎಲ್ಲಾ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಹಾಗೂ ಸನ್ಮಾನ ಸ್ವೀಕ–ರಿಸಿದ ಕಡಕೋಳ ಪಟ್ಟಣ ಪಂಚಾಯಿತಿಯ ಪೌರಕಾರ್ಮಿಕರು ಭಾಗವಹಿಸಿದ್ದರು,

ಚಲನಚಿತ್ರ ಸಾಹಿತಿ ಡಾ. ವಿ.ನಾಗೇಂದ್ರ ಪ್ರಸಾದ್ ನಿರ್ದೇಶನದ 'ಶುಭಲಾಭ' ಚಲನಚಿತ್ರಕ್ಕೆ ಮುಹೂರ್ತ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಿಯಾ ಕಂಬೈನ್ಸ್ ಲಾಂಛನದ ಅಡಿಯಲ್ಲಿ ಶ್ರೀಮತಿ ಯಮುನಾ ಪ್ರಸಾದ್ ನಿರ್ಮಿಸುತ್ತಿರುವ 'ಶುಭಲಾಭ' ಹೊಸ ಕನ್ನಡ ಚಲನ ಚಿತ್ರದ ಮುಹೂರ್ತ ಸಮಾರಂಭ ಮುದ್ದಿನ ಪಾಳ್ಯದ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ನೆರವೇರಿತು.

ಕನ್ನಡ ಚಿತ್ರರಂಗದ ಹೆಸರಾಂತ ಚಲನಚಿತ್ರ ಸಾಹಿತಿ ಕವಿರತ್ನ ಡಾ.ವಿ.ನಾಗೇಂದ್ರ ಪ್ರಸಾದ್ ಈ ಬಾರಿ ನಿರ್ದೇಶನದ ಜೊತೆಗೆ 'ಶುಭಲಾಭ' ಚಿತ್ರದ ಮೂಲಕ ಪುತ್ರ ಉತ್ಸವ್ ಪ್ರಸಾದ್‌ರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸ್ತಿರೋದು ವಿಶೇಷ. ವಿಜಯ ದಶಮಿ ಹಬ್ಬದ ಪ್ರಯುಕ್ತ ಉದ್ಯಮಕ್ಕೆ ಶುಭ ಸೂಚಿಸುವ..ಲಾಭ ನಿರೀಕ್ಷಿಸುವ ಕಾರ್ಯಕ್ಕೆ ಡಾ.ವಿ.ನಾಗೇಂದ್ರ ಪ್ರಸಾದ್ ಚಾಲನೆ ನೀಡಿದ್ದು, ಚಿತ್ರದ ಮುಹೂರ್ತದಲ್ಲಿ ಲವ್ಲೀ ಸ್ಟಾರ್ ಪ್ರೇಮ್ ಆರಂಭ ಫಲಕ ತೋರಿಸಿದರೆ, ಹಿರಿಯ ನಿರ್ದೇಶಕ ಎಸ್. ಮಹೇಂದರ್ ಕ್ಯಾಮೆರಾ ಚಾಲನೆ ಮಾಡುವ ಮೂಲಕ ಚಿತ್ರಕ್ಕೆ ಮತ್ತು ತಂಡಕ್ಕೆ ಶುಭಕೋರಿದರು.

ಈ ಸಂದರ್ಭದಲ್ಲಿ ಚಿತ್ರರಂಗದ ಪ್ರಮುಖರು ,ಚಿತ್ರತಂಡ ಉಪಸ್ಥಿತರಿದ್ದರು. ಹಿರಿಯ ನಟ ದತ್ತಣ್ಣ ಬಹು ಮುಖ್ಯ ಪಾತ್ರದಲ್ಲಿದ್ದು, ಅವರೊಟ್ಟಿಗೆ ಉತ್ಸವ್ ಪ್ರಸಾದ್ ನಾಯಕ ನಟನಾಗಿ ಮೊದಲ ಸಲ ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ. ಚಿತ್ರದ ಚಿತ್ರೀಕರಣ ವಿಜಯಪುರ, ಬಾದಾಮಿ, ಬಾಗಲಕೋಟೆ, ಸಿಂದಗಿ ಭಾಗದಲ್ಲಿ ನಡೆಯಲಿದ್ದು ಸದ್ಯದಲ್ಲೇ ಚಿತ್ರೀಕರಣಕ್ಕೆ ಚಾಲನೆ ನೀಡಲಾಗುತ್ತಿದೆ. ಉತ್ತರ ಕರ್ನಾಟಕದ ಸ್ಥಳೀಯ ಅನುಭವಿಕ, ರಂಗಭೂಮಿ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಲಾಗುತ್ತಿದೆ. ಚಿತ್ರದಲ್ಲಿ ಮೂರು ಹಾಡುಗಳಿವೆ ಎಂದು ಚಲನಚಿತ್ರ ಸಾಹಿತಿ, ನಿರ್ದೇಶಕ ಡಾ.ವಿ.ನಾಗೇಂದ್ರ ಪ್ರಸಾದ್ ಹೇಳಿದರು.

ಉಪ್ಪಿ ,ವಿದ್ಯ ನಾಗೇಶ್ ಛಾಯಾಗ್ರಹಣ , ವಿಜಯಾನಂದ್ ಸಂಭಾಷಣೆ, ವಿ. ಹ–ರಿಕೃಷ್ಣ ಸಂಗೀತ, ಸುರೇಶ್ ಅರಸು ಸಂಕಲನ, ವಿನ್ಯಾಸ ಸಾಕ್ಷಿ ಶಿವು, ಪತ್ರಿಕಾ ಸಂಪರ್ಕ ಪ್ರವೀಣ್ ಏಕಾಂತ್ , ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಸಹಾಯಕ ನಿರ್ದೇಶನ ಪವನ್ ರಾವ್, ಚೇತನ್ ಪಡುಕೋಣೆ, ಕಥೆ



ಚಿತ್ರಕಥೆ ಸಾಹಿತ್ಯ ನಿರ್ದೇಶನ ಡಾ.ವಿ.ನಾಗೇಂದ್ರ ಪ್ರಸಾದ್ ಅವರದಿದ್ದು ನಿರ್ಮಾಣ ನಿರ್ವಹಣೆ ಹರಿಹರನ್ ಬಿಪಿ ಮತ್ತು ಸುನಿಲ್ ಅವರದಿದೆ.

–ಡಾ.ಪ್ರಭು ಗಂಜಿಹಾಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಕಾಕ್ರೋಚ್‌ಗಳ ಬೆಂಬಲಕ್ಕೆ ನಿಂತ ಅಣ್ಣಾಮಲೈ

❏ ನೈಜ್ಯ ದೆಸೆ ನ್ಯೂಸ್

ಕೊಯಮತ್ತೂರು(ಪಿಟಿಐ)– ಸಿಂಗಂ ಖ್ಯಾತಿಯ ನಿವೃತ್ತ ಐಪಿಎಸ್ ಅಧಿಕಾರಿ ಅಣ್ಣಾಮಲೈ ಅವರು ಕಾಕ್ರೋಚ್ ಜನತಾ ಪಾರ್ಟಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಸಿಜೆಪಿ ಸದಸ್ಯರ ವಿರುದ್ಧ ದೆಹಲಿ ಪೊಲೀಸರು ಕೈಗೊಂಡ ಇತ್ತೀಚಿನ ಕ್ರಮಗಳನ್ನು ಟೀಕಿಸಿದ್ದು, ಇದನ್ನು ನಿಜವಾದ ತಪ್ಪು ನಡೆ ಎಂದು ಕರೆದಿದ್ದಾರೆ. ಅಲ್ಲದೆ, ಟೀಕಾತ್ಮಕ ಪ್ರಶ್ನೆಗಳನ್ನು ಎತ್ತುವ ಈ ಸಂಘಟನೆಯ ಪ್ರಜಾಸತ್ತಾತ್ಮಕ



ಹಕ್ಕನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

ಈ ಗುಂಪಿನ ಎಲ್ಲ ಕಾರ್ಯತಂತ್ರಗಳು ಅಥವಾ ಪ್ರತಿಭಟನಾ ವಿಧಾನಗಳೊಂದಿಗೆ ತಾವು ಸಂಪೂರ್ಣವಾಗಿ ಒಪ್ಪದಿರಬಹುದು ಎಂದು ಒಪ್ಪಿಕೊಂಡರೂ, ಅವರು ಎತ್ತುತ್ತಿರುವ ಪ್ರಶ್ನೆಗಳ ನ್ಯಾಯಸಮ್ಮತತೆಯನ್ನು ಅಣ್ಣಾಮಲೈ ದೃಢವಾಗಿ ಬೆಂಬಲಿಸಿದರು ಮತ್ತು ಸರ್ಕಾರವು ಈ ಪ್ರಶ್ನೆಗಳಿಗೆ ಉತ್ತರಿಸಲೇಬೇಕು ಎಂದು ಪ್ರತಿಪಾದಿಸಿದರು. "ದೆಹಲಿ ಪೊಲೀಸರು ನಿಜವಾಗಿಯೂ ತಪ್ಪು ಮಾಡುತ್ತಿದ್ದಾರೆ" ಎಂದು 'ವಿ ದಿ ಲೀಡರ್ಸ್' ಚಳವಳಿಯ ಸಂಸ್ಥಾಪಕ ಅಣ್ಣಾಮಲೈ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಸಿಜೆಪಿ ಸದಸ್ಯರ ಬಂಧನ ಮತ್ತು ಅವರ ವಿರುದ್ಧ ಪೊಲೀಸರು ಕೈಗೊಂಡ ಕಠಿಣ ಕ್ರಮಗಳನ್ನು ಅವರು ತೀವ್ರವಾಗಿ ಖಂಡಿಸಿದರು. "ಅವರ ನಡೆಗಳು ಅಥವಾ ಪ್ರತಿಭಟನಾ ವಿಧಾನಗಳೊಂದಿಗೆ ನಾನು ಒಪ್ಪದಿರಬಹುದು.

ಆದರೆ, ಅವರು ಎತ್ತಲು ಬಯಸುವ ಪ್ರಶ್ನೆಗಳ ವಿಷಯದಲ್ಲಿ ನಾನು ಸಿಜೆಪಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅವರನ್ನು ಬಂಧಿಸಿ ಜೈಲಿಗೆ ಕಳುಹಿಸುವುದರಿಂದ ಅವರ ನಾಯಕರು ಇನ್ನಷ್ಟು ಬಲಶಾಲಿಯಾಗುತ್ತಾರೆ ಅಷ್ಟೇ" ಎಂದು ಅವರು ಹೇಳಿದರು.

ಕಾರುಣ್ಯಾಶ್ರಮದಲ್ಲಿ ಮಾಜಿ ಸಂಸದ ರಮೇಶ ಕತ್ತಿ ಅವರ ಅರ್ಥಪೂರ್ಣ ಜನ್ಮದಿನ ಸಮಾರಂಭ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ವೀರಣ್ಣ ಎಸ್. ಕಲಕಬಂಡಿ ಗೆಳೆಯರ ಬಳಗ ಕುಷ್ಟಗಿ ವತಿಯಿಂದ ಭಾರತೀಯ ಕೃಷಿ ಕಾರ್ಮಿಕ ರೈತ ಸಂಘಟನೆಯ ಜಿಲ್ಲಾಧ್ಯಕ್ಷರಾದ ವೀರಣ್ಣ ಎಸ್ ಕಲಕಬಂಡಿ ಇವರ ನೇತೃತ್ವದಲ್ಲಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಮಾಜಿ ಸಂಸದರು ಹಾಗೂ ಬೆಳಗಾವಿ ಡಿ.ಸಿ.ಸಿ. ಬ್ಯಾಂಕಿನ ಮಾಜಿ ಅಧ್ಯಕ್ಷರಾದ ರಮೇಶ ಕತ್ತಿ ಅವರ 63ನೇ ವರ್ಷದ ಜನ್ಮ ಸಾರ್ಥಕ ದಿನವನ್ನು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀ ಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯದಾತರುಗಳಿಗೆ ಹೊಸ ವಸ್ತ್ರಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳು ಹಾಗೂ ಹಾಲು ಬ್ರೆಡ್ ಬಿಸ್ಕಿಟ್ ಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.

ಈ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶ್ರಯದಾತರುಗಳಿಂದ ಕೇಕ್ ಕತ್ತ–ರಿಸುವ ಮೂಲಕ ರಮೇಶ ಕತ್ತಿ ಅವ–ರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿದರು. ಈ ಕಾರ್ಯಕ್ರಮದಲ್ಲಿ ವಿಡಿಯೋ ಕಾನ್ಫಿರೆನ್ಸ್ ಮೂಲಕ ರಮೇಶ್ ಕತ್ತಿ ಅವರು ಆಶ್ರಯದಾತರುಗಳ ಯೋಗ ಕ್ಷೇಮವನ್ನು ವಿಚಾರಿಸಿ ಆತ್ಮಸ್ಥೈರ್ಯ ತುಂಬಿದರು. ಈ ಕಾರ್ಯಕ್ರಮದಲ್ಲಿ ಕತ್ತಿ ಕುಟುಂಬದ ಅಭಿಮಾನಿ ಹಾಗೂ ಕೊಪ್ಪಳ ಜಿಲ್ಲಾ ಭಾರತೀಯ ಕೃಷಿ ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷರಾದ ವೀರಣ್ಣ ಎಸ್. ಕಲಕಬಂಡಿ ಮಾತನಾಡಿ ನಮ್ಮ ನಾಯಕರು ಹಾಗೂ ಮಾರ್ಗದರ್ಶಕರಾದ ರಮೇಶ್ ಕತ್ತಿ ಅವರ ಇಂದಿನ ಜನ್ಮದಿನ ಅವರ ಆಶಯದಂತೆ ವಿವಿಧ ಸಮಾಜಪರ ಜನಪರ ಕಾರ್ಯಗಳನ್ನು ಮಾಡುವ ಮೂಲಕ ನೆರವೇರಿಸುತ್ತಿದ್ದೇವೆ.

ರಾಜಕಾರಣದಲ್ಲಿ ವಿಶೇಷ ಸಾಮಾಜಿಕ ಕಾರ್ಯಗಳನ್ನು



ಮಾಡುತ್ತಿರುವ ರಮೇಶ್ ಕತ್ತಿ ಅವರ ಕುಟುಂಬ ಸಾರ್ಥಕ ಸೇವೆಯನ್ನು ನಮ್ಮ ನಾಡಿಗೆ ಒದಗಿಸುತ್ತಿದೆ. ಮತ್ತು ವಿಶೇಷವಾಗಿ ಕಾರುಣ್ಯ ಆಶ್ರಮದಲ್ಲಿರುವ ಎಲ್ಲಾ ಹಿರಿಯರ ಹಾಗೂ ವಯಸ್ಕರ ಬುದ್ಧಿಮಾಂದ್ಯರು ನಮ್ಮ ಕುಟುಂಬದ ಸದಸ್ಯರಿದ್ದಂತೆ ಅವರೆಲ್ಲರ ಶ್ರೀರಕ್ಷೆ ನಮ್ಮ ಮೇಲೆ ಇರಲಿ ಎನ್ನಾ ಭಾವನೆ ನಮ್ಮ ರಮೇಶ್ ಕತ್ತಿ ಅವರದ್ದು ಹಲವಾರು ಪರಂಪರೆ ಇತಿಹಾಸವನ್ನು ಹೊಂದಿರುವ ಅವರ ಕುಟುಂಬ ರಾಜಕಾರಣದಲ್ಲಿ ವಿಶೇಷ ಸಂಚಲನ ಮೂಡಿಸಿದೆ. ಇತಿಹಾಸ ಹೊಂದಿದ ಕುಟುಂಬ ರಮೇಶ್ ಕತ್ತಿ ಅವರು ನಮ್ಮ ನಾಡಿನ ಅಪರೂಪದ ರಾಜಕಾರಣಿ ನಮ್ಮ ಭಾರತೀಯ ಸಂಸ್ಕಾರ ಸಂಸ್ಕೃತಿ ಸಂಪ್ರದಾಯವನ್ನು ಕಾಪಾಡುವ ಮೂಲಕ ಸರ್ವಧರ್ಮದ ಪ್ರೀತಿ ವಿಶ್ವಾಸ ಗಳಿಸಿರುವ ಕರುಣಾಮಯಿ ಕುಟುಂಬ ಕತ್ತಿ ಕುಟುಂಬ ಅವರು ಬರಗಾಲದ ಈ ಸ್ಥಿತಿಯಲ್ಲಿ ನಮ್ಮ ಜನ್ಮದಿನವನ್ನು ಆಡಂಬರವಾಗಿ ಆಚರಣೆ ಮಾಡಬಾರದು ಎಂದು ಎಲ್ಲಾ ಅಭಿಮಾನಿಗಳಿಗೆ ಸೂಚಿಸಿದ್ದಾರೆ.

ಅವರ ಸೂಚನೆಯಂತೆ ನಾವು ಸರಳ ಸಾಮಾನ್ಯವಾಗಿ ಅರ್ಥಪೂರ್ಣವಾದಂತಹ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ರಮೇಶ್ ಕತ್ತಿ ನಮ್ಮ ಕುಷ್ಟಗಿ ಭಾಗದಲ್ಲಿ ತಮ್ಮದೇ ಆದಂತಹ ವರ್ಚಸ್ಸು ಮೂಡಿಸಿಕೊಂಡಿರುವ ಸಾಮಾನ್ಯ ರಾಜ–ಕಾರಣಿಯಾಗಿದ್ದಾರೆ. ಅವರು ಮುಂದಿನ ದಿನಮಾನಗಳಲ್ಲಿ ಸಂಸದರು ಶಾಸಕರು ಸಚಿವರಾಗಿ ಕಾರುಣ್ಯ ಆಶ್ರಮಕ್ಕೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಾರೆ. ಅವರಿಗೆ ಹಾಗೂ ಅವರ ಕುಟುಂಬಕ್ಕೆ ದೇವರು ಆಯಸ್ಸು ಆಯುರ್ ಆರೋಗ್ಯ ಸುಖ ಶಾಂತಿ ನೆಮ್ಮದಿ ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ಅವರ ಜನ್ಮದಿನದ ಈ ದಿನವನ್ನು ರಮೇಶ್ ಕತ್ತಿ ಅವರ ಜನ್ಮ ಸಾರ್ಥಕ ದಿನವೆಂದು ನಾವು ಆಚರಿಸುತ್ತಿದ್ದೇವೆ.

ಎಂದು ಮಾತನಾಡಿ ರಮೇಶ್ ಕತ್ತಿ ಅವರಿಗೆ ಶುಭ ಕೋರಿದರು. ಈ ಕಾರ್ಯಕ್ರಮದಲ್ಲಿ ರಮೇಶ್ ಕತ್ತಿ ಅವರ ಜನ್ಮದಿನದ ಅಂಗವಾಗಿ ಕಾರುಣ್ಯ ಕುಟುಂಬದಿಂದ ರಂಗಪ್ಪ ಚೂರಿ ಪೊಲೀಸ್ ಇಲಾಖೆ ಕುಷ್ಟಗಿ. ಬಸವರಾಜ ಅಂಗಡಿ. ಶಾಂತಪ್ಪ ಬನ್ನಿಗೋಳ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ವೇದಮೂರ್ತಿ ಶರಣಯ್ಯ ಸ್ವಾಮಿ ಹಿರೇಮಠ ಕುಷ್ಟಗಿ ದಿವ್ಯ ಸಾನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಂಗಪ್ಪ ಚೂರಿ. ಶಿವು ಪೂಜಾರಿ. ಬಸವರಾಜ ಅಂಗಡಿ. ಶಾಂತಪ್ಪ ಬನ್ನಿಗೋಳ. ಹಾಗೂ ಆಶ್ರಮದ ಕಾರ್ಯಧ್ಯಕ್ಷರಾದ ಡಾ.ನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ ವಿದ್ಯಾಶ್ರೀ. ಮರಿಯಪ್ಪ.ಶಂಕ್ರಮ್ಮ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಕುಷ್ಟಗಿಯ ರಮೇಶ್ ಕತ್ತಿ ಅವರ ಹಲವಾರು ಅಭಿಮಾನಿಗಳು ಉಪಸ್ಥಿತರಿದ್ದರು.

ವಚನ ದರ್ಶನ

ಭವಬಂಧನ ಭವಪಾಶವಾದ ಕಾರಣವೇನಯ್ಯಾ?ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ,ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,ಶಿವಶರಣರ ಮನನೋಯಿಸಿ,ಭಕ್ತಿಹೀನನಾಗಿ ಕರಸ್ಥಲದ ಲಿಂಗವ ಮರೆದೆನಾಗಿಈ ಬವಣೆ ಬಂದಿತಲ್ಲದೆ,ಅದೆಲ್ಲಿಯದೊ ಪ್ರಮಥರಾಣೆ,ಮಹಾದಾನಿಯಾದ ನಮ್ಮ ಕೂಡಲಸಂಗಮದೇವಯ್ಯಾ,ನಿಮ್ಮ ಶರಣರ ಸೇವೆಗೆ ಮರಳಿ ಹುಟ್ಟಿಸಿದೆಡೆ ಸಾಲದೆ?
ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಅರ್ಥಗರ್ಭಿತ ವಚನಗಳಲ್ಲಿ ಒಂದಾಗಿದೆ.

ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಮನುಷ್ಯನಿಗೆ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ಬಂಧನ ಹಾಗೂ ಪಾಶ ಹಗ್ಗ ಬೇಡಿ ಆಗಿ ಕಾಡಲು ಕಾರಣವೇನು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ
ಇದಕ್ಕೆ ಅವರೇ ಉತ್ತರಿಸುತ್ತಾ, "ನಾವು ನಮ್ಮ ಹಿಂದಿನ ಜನ್ಮಗಳಲ್ಲಿ ಭಗವಂತನನ್ನು, ಲಿಂಗವನ್ನು ಮರೆತುಬಿಟ್ಟಿವಿ" ಎನ್ನುತ್ತಾರೆ.

ಹಿಂದಣ ಸಿರಿಯಲ್ಲಿ ಜಂಗಮನ ಮರೆದೆನಾಗಿ ನಮಗೆ ಹಿಂದಿನ ಜನ್ಮದಲ್ಲಿ ಸಿರಿ-ಸಂಪತ್ತು ಇದ್ದಾಗ, ಆ ಹಮ್ಮಿನಲ್ಲಿ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಜಂಗಮರನ್ನು (ಶಿವಶರಣರನ್ನು ಅಥವಾ ಸತ್ಪುರುಷರನ್ನು) ಮರೆತೆವು ಅಥವಾ ಅವರನ್ನು ನಿಂದಿಸಿದೆವು. ಈ ಅಹಂಕಾರ ಮತ್ತು ಮರೆವೇ ನಮ್ಮ ಇಂದಿನ ದುಃಖ ಹಾಗೂ ಸಂಸಾರದ ಬಂಧನಕ್ಕೆ ಮುಖ್ಯ ಕಾರಣ.

ಅರಿದೊಡೀ ಸಂಸಾರವ ಹೊದ್ದಲೀವನೆ ಕೂಡಲಸಂಗಮದೇವಾ!
ಒಮ್ಮೆ ನಮಗೆ ಈ ಸತ್ಯದ ಅರಿವಾದರೆ (ನಾವು ಮಾಡಿದ ತಪ್ಪುಗಳ ಅರಿವಾಗಿ, ಭಗವಂತ ಮತ್ತು ಸತ್ಪುರುಷರ ಮಹತ್ವ ತಿಳಿದರೆ), ಓ ಕೂಡಲಸಂಗಮದೇವಾ, ಈ ಮಾಯೆಯ ಸಂಸಾರವು ನಮ್ಮನ್ನು ಮತ್ತೆ ಕಾಡಲು ಸಾಧ್ಯವೇ? ಇಲ್ಲ, ಖಂಡಿತಾ ನಾವು ಈ ಬಂಧನದಿಂದ ಮುಕ್ತರಾಗುತ್ತೇವೆ.

ಸಾರಾಂಶ ಸಂಪತ್ತು ಮತ್ತು ಅಧಿಕಾರ ಬಂದಾಗ ದೇವನನ್ನೂ, ಸಮಾಜವನ್ನೂ ಮರೆಯಬಾರದು. ಅಹಂಕಾರವನ್ನು ಬಿಟ್ಟು ಅರಿವಿನಿಂದ ಬದುಕಿದರೆ ಮಾತ್ರ ಭವಬಂಧನದಿಂದ ಮುಕ್ತಿ ಪಡೆಯಬಹುದು ಎಂಬುದು ಈ ವಚನದ ಸಂದೇಶವಾಗಿದೆ. ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಮೈಸೂರು ದಸರಾ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಜಟ್ಟಿ ಕಾಳಗ ರದ್ದು

❑ ನೈಜ್ಯ ದೆಸೆ ನ್ಯೂಸ್

ಮೈಸೂರು: ನಾಡಹಬ್ಬ ಮೈಸೂರು ದಸರಾದ ಖಾಸಗಿ ದರ್ಬಾರ್‌ನ ಪ್ರಮುಖ ಆಕರ್ಷಣೆಯಾದ ಐತಿಹಾಸಿಕ ಜಟ್ಟಿ ಕಾಳಗ ಈ ಬಾರಿ ರದ್ದಾಗಿದೆ. ಶಮಿ ಪೂಜೆಯಿಂದ ವಾಪಸಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅರಮನೆಗೆ ಹಿಂದಿರುಗಿದ ಬೆನ್ನಲ್ಲೇ ಜಟ್ಟಿ ಕಾಳಗ ರದ್ದಾಗಿದೆ. ರಾಜ ಮನೆತನದವರನ್ನು ಮನವೊಲಿಸಲು ಯತ್ನ ನಡೆದರೂ ಪ್ರಯೋಜನವಾಗಲಿಲ್ಲ.



ಮುಹೂರ್ತ ಮೀರಿದ್ದೇ ಕಾರಣ : ನಿಗದಿತ ಮುಹೂರ್ತ ಮೀರಿದ್ದರಿಂದ ಜಟ್ಟಿ ಕಾಳಗವನ್ನು ರದ್ದುಗೊಳಿಸಲಾಗಿದೆ. ದಸರಾ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಜಟ್ಟಿ ಕಾಳಗ ರದ್ದಾಗಿರುವುದು ವಿಷಾದನೀಯ ಸಂಗತಿ.
ಪೊಲೀಸರ ವಿರುದ್ಧ ಆಕ್ರೋಶ : ಕಾಳಗ ರದ್ದಾಗಲು ಪೊಲೀಸರ ಅಡಚಣೆಯೇ ಕಾರಣ ಎಂದು ಪೈಲ್ವಾನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಕಾಲಕ್ಕೆ ಪ್ರವೇಶ ಕಲ್ಪಿಸಿದ್ದರೆ ಸಿದ್ಧತೆ ಮಾಡಿಕೊಳ್ಳಬಹುದಿತ್ತು. ಆದ-'ರೆ ಪೊಲೀಸರು ಸರಿಯಾದ ಸಮಯಕ್ಕೆ ಒಳಗೆ ಬಿಡದ ಕಾರಣ ಮುಹೂರ್ತ ಮೀರಿತು ಎಂದು ಪೈಲ್ವಾನರು

ಪೊಲೀಸ್ ಹುತಾತ್ಮರ ಕುಟುಂಬಗಳಿಗೆ ಗೌರವ ಸನ್ಮಾನ

ಜನರ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದ ವೀರರ ಬಲಿದಾನಕ್ಕೆ ನಮನ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ತವ್ಯ ನಿರ್ವಹಣೆಯೇ ಜೀವನದ ಧ್ಯೇಯವೆಂದು ಭಾವಿಸಿ, ಸಾರ್ವಜನಿಕರ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ತ್ಯಾಗವನ್ನು ಸ್ಮರಿಸುವುದು ಪ್ರತಿಯೊಬ್ಬ ನಾಗ-ರಿಕನ ಕರ್ತವ್ಯವಾಗಿದೆ. 2026ನೇ ಸಾಲಿನ ಪೊಲೀಸ್ ಹುತಾತ್ಮರ ದಿನಾಚರಣೆಯ ಸಂದರ್ಭದಲ್ಲಿ ಹುತಾತ್ಮ ಪೊಲೀಸ್ ಸಿಬ್ಬಂದಿಯ ಕುಟುಂಬದವರನ್ನು ಗೌರವಿಸುವ ಮೂಲಕ ಅವರ ಸೇವೆ ಮತ್ತು ಬಲಿದಾನಕ್ಕೆ ಗೌರವ ಸಲ್ಲಿಸಲಾಯಿತು.

ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಹುತಾತ್ಮರಾದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕುಟುಂಬದವರನ್ನು ಸನ್ಮಾನಿಸುವುದು ಅವರ ತ್ಯಾಗವನ್ನು ಸಮಾಜ ಗುರುತಿಸಿದಂತಾಗಿದೆ. ಕುಟುಂಬದ ಸದಸ್ಯರನ್ನು ಕಳೆದುಕೊಂಡ ನೋವಿನ ನಡುವೆಯೂ ಅವರ ಸೇವೆಯ ಬಗ್ಗೆ ಹೆಮ್ಮೆ ಹೊಂದಿರುವ ಕುಟುಂಬದವರಿಗೆ ಇಂತಹ ಗೌರವ ಕಾರ್ಯಕ್ರಮಗಳು ಆತ್ಮಸ್ಥೈರ್ಯ ನೀಡುವ ಮಹತ್ವದ ಸಂದರ್ಭಗಳಾಗಿವೆ.

ಪೊಲೀಸ್ ಸೇವೆ ಎಂದರೆ ಕೇವಲ ಉದ್ಯೋಗವಲ್ಲ, ಜನರ ಸುರಕ್ಷತೆಯ ಹೊಣೆಗಾರಿಕೆ



ಪೊಲೀಸ್ ಸಿಬ್ಬಂದಿ ಹಗಲು-ರಾತ್ರಿ ಎನ್ನದೆ ಸಾರ್ವಜನಿಕರ ರಕ್ಷಣೆಗಾಗಿ ಶ್ರಮಿಸುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಅಪರಾಧಗಳನ್ನು ತಡೆಗಟ್ಟುವುದು, ಸಂಕಷ್ಟದಲ್ಲಿರುವವರಿಗೆ ನೆರವಾಗುವುದು ಸೇ-ರಿದಂತೆ ಹಲವು ಜವಾಬ್ದಾರಿಗಳನ್ನು ಅವರು ನಿರ್ವಹಿಸುತ್ತಾರೆ. ಈ ಸಂದರ್ಭದಲ್ಲಿ ಎದುರಾಗುವ ಅಪಾಯಗಳ ನಡುವೆಯೂ ಕರ್ತವ್ಯಕ್ಕೆ ಆದ್ಯತೆ ನೀಡುವ ಪೊಲೀಸ್ ಸಿಬ್ಬಂದಿಯ ಸೇವೆ ಗೌರವಕ್ಕೆ ಅರ್ಹವಾಗಿದೆ. ಕರ್ತವ್ಯದ ವೇಳೆ ಪ್ರಾಣ ಕಳೆದುಕೊಂಡ ಪೊಲೀಸ್ ಸಿಬ್ಬಂದಿಯ ತ್ಯಾಗವನ್ನು ಸ್ಮ-ರಿಸುವುದರ ಜೊತೆಗೆ, ಅವರ ಕುಟುಂಬದವ-ರಿಗೆ ಸಮಾಜದ ಬೆಂಬಲ ಮತ್ತು ಗೌರವ ದೊರೆಯುವುದು ಅತ್ಯಂತ ಮುಖ್ಯವಾಗಿದೆ.

ಹುತಾತ್ಮರ ಕುಟುಂಬಗಳ ತ್ಯಾಗವೂ ಸ್ಮರಣೀಯ
ಒಬ್ಬ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುವಾಗ ಅವರ ಕುಟುಂಬವೂ ಅನೇಕ ತ್ಯಾಗಗಳನ್ನು ಮಾಡುತ್ತದೆ. ಕುಟುಂಬದವರ ಸುರಕ್ಷತೆಗಾಗಿ ಆತಂಕದಿಂದ ಕಾಯುವ ಪೋಷಕರು, ಪತ್ನಿ, ಮಕ್ಕಳು ಹಾಗೂ ಬಂಧುಗಳು ಅನುಭವಿಸುವ ನೋವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.


ಹೀಗಾಗಿ, ಹುತಾತ್ಮರ ಕುಟುಂಬದವರನ್ನು ಗೌರವಿಸುವುದು ಕೇವಲ ಔಪಚಾರಿಕ ಕಾರ್ಯಕ್ರಮವಾಗದೆ, ಅವರ ತ್ಯಾಗವನ್ನು ಗುರುತಿಸುವ ಮಾನವೀಯ ನಡೆ ಆಗಬೇಕು. ಕುಟುಂಬಗಳಿಗೆ ಸಾಂತ್ವನ, ಗೌರವ ಹಾಗೂ ಅಗತ್ಯ ನೆರವು ಒದಗಿಸುವುದು ಸಮಾಜ ಮತ್ತು ಆಡಳಿತದ ಜವಾಬ್ದಾರಿಯಾಗಿದೆ.
ವೀರರ ತ್ಯಾಗ ಮುಂದಿನ ಪೀಳಿಗೆಗೆ ಸ್ಫೂರ್ತಿ
ಪೊಲೀಸ್ ಹುತಾತ್ಮರ ಧೈರ್ಯ, ಶಿಸ್ತು, ಕರ್ತವ್ಯನಿಷ್ಠೆ ಮತ್ತು ಜನಸೇವೆಯ ಮನೋಭಾವ ಯುವಜನತೆಗೆ ಮಾದರಿಯಾಗಬೇಕು. ಅವರ ಜೀವನ ಮತ್ತು ಸೇವೆಯ ಕು-ರಿತು ಮುಂದಿನ ಪೀಳಿಗೆಗೆ ತಿಳಿಸುವುದರಿಂದ ಸಮಾಜದಲ್ಲಿ ದೇಶಸೇವೆ ಹಾಗೂ ಸಾರ್ವಜನಿಕ ಕರ್ತವ್ಯದ ಬಗ್ಗೆ ಗೌರವ ಹೆಚ್ಚುತ್ತದೆ. ಕರ್ತವ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಪೊಲೀಸ್ ವೀರರಿಗೆ ಶತಶತ ನಮನಗಳು. ಅವರ ಕುಟುಂಬದವರ ತ್ಯಾಗಕ್ಕೆ ಗೌರವಪೂರ್ವಕ ವಂದನೆಗಳು. ಅವರ ಬಲಿದಾನ ಎಂದೆಂದಿಗೂ ಅಮರವಾಗಿರಲಿ.

ವಿಜಯದಶಮಿ ಪ್ರಯುಕ್ತ ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆ

❑ ನೈಜ್ಯ ದೆಸೆ ನ್ಯೂಸ್

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ವಿಜಯದಶಮಿ ಪ್ರಯುಕ್ತ ಇಂದು ಬೆಳಗ್ಗೆ 4 ಗಂಟೆಯಿಂದಲೇ ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ನೆರವೇರಿತ್ತು.

ಬೆಳಗ್ಗೆ 4 ಗಂಟೆಗೆ ದೇವಸ್ಥಾನದ ಬಾಗಿಲು ತೆರೆಯಲಾಗಿ ಅಭಿಷೇಕ, ಚಂಡಿ ಹೋಮ, ಕುಂಕುಮಾರ್ಚನೆ, ಸಹಸ್ರನಾಮ ಅರ್ಚನೆ ನೆರವೇರಿತ್ತು. ಬೆಳಗ್ಗೆ 6.30 ಕ್ಕೆ ಮಹಾ ಮಂಗಳಾರತಿ ನೆರವೇರಿದ ನಂತರ ಭಕ್ತ-ರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪೂಜೆಯ ನಂತರ ಬೆಳಗ್ಗೆ 7.15 ಗಂಟೆಗೆ ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯು ಚಾಮುಂಡಿ ಬೆಟ್ಟದಿಂದ ಮೈಸೂರು ಅರಮನೆಯತ್ತ ಭವ್ಯ ಮೆರವಣಿಗೆಯಲ್ಲಿ ಹೊರಟಿತ್ತು.
ಬೆಳಗ್ಗೆ 7 ಗಂಟೆಯಿಂದಲೇ ರಸ್ತೆ ಬದಿ ನಿಂತಿದ್ದ ಜನಸಾಗರ : ಬೆಳಗ್ಗೆ 7 ಗಂಟೆಯಿಂದಲೇ ಚಾಮುಂಡಿ



ಬೆಟ್ಟದಿಂದ ಅರಮನೆಯವರೆಗಿನ ರಸ್ತೆಯ ಎರಡೂ ಬದಿಯಲ್ಲಿ ಸಾವಿರಾರು ಭಕ್ತರು ಸಾಲುಗಟ್ಟಿ ನಿಂತಿದ್ದರು. ತಾಯಿಯ ದರ್ಶನ ಪಡೆಯಲು ಚಿಕ್ಕ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ಸಾವಿರಾರು ಜನ ಮುಂಜಾನೆಯಿಂದಲೇ ಕಾದು ಕುಳಿತಿದ್ದರು.

ಜೈ ಚಾಮುಂಡಿ ತಾಯಿ ಎಂಬ ಜಯಘೋಷದೊಂದಿಗೆ ಭಕ್ತರು ಹೂ, ಕುಂಕುಮ ಎರಚಿ ದೇವಿಯನ್ನು ಸ್ವಾಗತಿಸಿದ್ದರು. ರಸ್ತೆಯ ಇಕ್ಕೆಲಗಳಲ್ಲಿ ಜನ ತುಂಬಿ ತುಳುಕುತ್ತಿದ್ದ ದೃಶ್ಯ ಕಂಡುಬಂದಿತ್ತು.
200 ಪೊಲೀಸ್ ಸಿಬ್ಬಂದಿಯಿಂದ ಬಿಗಿ ಭದ್ರತೆ : ಭಕ್ತರ ಸುರಕ್ಷತೆಗಾಗಿ ಬೆಳಗ್ಗೆ 7 ಗಂಟೆಯಿಂದಲೇ 200 ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು.

ಚಾಮುಂಡಿ ಬೆಟ್ಟದ ತಪ್ಪಲಿನಿಂದ ಅರಮನೆಯವರೆಗೆ ಬ್ಯಾರಿಕೇಡ್ ಅಳವಡಿಸಿ, ಸಂಚಾರ ಮಾರ್ಗ ಬದಲಾವಣೆ ಮಾಡಿ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಮುಂಜಾಗ್ರತಾ ಕ್ರಮ ವಹಿಸಲಾಗಿತ್ತು.ಅರಮನೆ ತಲುಪಿದ ನಂತರ ದೇವಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ, ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿ ಐತಿಹಾಸಿಕ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಪಥ ಸಂಚಲನ ಅನುಮತಿ ಕೇಳದ ಆರ್ ಎಸ್ ಎಸ್ ವಿರುದ್ಧ ಪ್ರಿಯಾಂಕ್ ಕಿಡಿ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಆರ್‌ಎಸ್‌ಎಸ್ ಸಂಘಟನೆಯ ವಿರುದ್ಧ ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಟ್ರಾವೆಲ್ಸ್ಲೈಡ್ ನೋಡಿ

ಆರ್‌ಎಸ್‌ಎಸ್ ನಡೆಸುತ್ತಿರುವ ಪಥಸಂಚಲನ ಮತ್ತು ಮೋಹನ್ ಭಾಗವತ್ ಅವರ 'ರೆಜಿಮ್ ಚೇಂಜ್' ಕುರಿತ ಹೇಳಿಕೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅವರು ಪ್ರಶ್ನೆಗಳನ್ನು ಎತ್ತಿದ್ದಾರೆ. ಪಥ-'ಸಂಚಲನ ಮಾಡಬೇಕಾದರೆ ಮಾಹಿತಿಗಾಗಿ ಮಾತ್ರ ಕೊಡುತ್ತಿದ್ದಾರೆ. ದಯವಿಟ್ಟು ಮಾಹಿತಿಗಾಗಿ ಅಲ್ಲ, ಅನುಮತಿ ಕೇಳಿ.

ಪೊಲೀಸ್ ಇಲಾಖೆ ಆರ್‌ಎಸ್‌ಎಸ್‌ನ ಆಳು ಮಕ್ಕಳಲ್ಲ. ಮಾಹಿತಿ ಕೊಟ್ಟು 'ಮೇಕ್ ನೆಸೆಸರಿ ಅರೇಂಜ್ಮೆಂಟ್ಸ್' ಎಂದು ಹೇಳುವುದು ಸರಿಯಲ್ಲ. ಹಬ್ಬದ ವಾತಾವರಣದಲ್ಲಿ



ಅನೇಕ ಜನರು ಆಚರಣೆ ಮಾಡುತ್ತಾರೆ. ನೀವು ಅನುಮತಿ ಕೇಳಿ, ಸೂಕ್ತ ಅನಿಸಿದರೆ ಅನುಮತಿ ನೀಡುತ್ತೇವೆ. ಗಣೇಶ ಮೆರವಣಿಗೆ ಮಾಡುವಾಗ ಮಾಹಿತಿ ಕೇಳುತ್ತೀರಾ ಅಥವಾ ಅನುಮತಿ ಕೇಳುತ್ತೀರಾ? ಮನೆ ಕಾರ್ಯಕ್ರಮ ಮಾಡಬೇಕಾದರೆ ರಸ್ತೆಯ ಮೇಲೆ ಪೆಂಡಾಲ್ ಹಾಕಿದಾಗ ಏನು ಮಾಡುತ್ತೀರೋ ಅದೇ ನಿಯಮ ಆರ್‌ಎಸ್‌ಎಸ್ ಗೂ ಅನ್ವಯಿಸುತ್ತದೆ. ಆರ್‌ಎಸ್‌ಎಸ್ ಕಾನೂನು ಮತ್ತು ಸಂವಿಧಾನಕ್ಕಿಂತ ಮೇಲಲ್ಲ, ಎಂದು ಹೇಳಿದರು.

"ರೆಜಿಮ್ ಹೇಗೆ ಚೇಂಜ್ ಮಾಡಲು ಸಾಧ್ಯ? ಮುಖ್ಯ ಚುನಾವಣಾ ಆಯುಕ್ತರು, ಇವಿಎಂ, ವೋಟರ್ ಲಿಸ್ಟ್, ಫಾರ್ಮ್ 6 ಮತ್ತು ಫಾರ್ಮ್ 7 ಎಲ್ಲವೂ ಅವರದ್ದೇ ಆಗಿವೆ. ಇದು ಶಾಶ್ವತ ಅಧಿಕಾರದಲ್ಲಿ ಇರಲು ಮಾಡುತ್ತಿರುವ ಸಂಚು. ಜನರು ಈಗ ಬೀದಿಗಿಳಿಯುತ್ತಿರುವುದೇ ಇದಕ್ಕೆ ಸಾಕ್ಷಿ. ಎಂದರು

ನೂರು ವರ್ಷದ ಇತಿಹಾಸದಲ್ಲಿ ಆರ್‌ಎಸ್‌ಎಸ್ ಯಾವ ಪ್ರತಿಭಟನೆ ಮಾಡಿದೆ ಅವರು ಬ್ರಿಟಿಷರ ಗುಲಾಮರು, ಪೆನ್ಷನ್ ತೆಗೆದುಕೊಳ್ಳುವವರ ಬಳಿ ನಾವು ಕಲಿಯಬೇಕೇ ಅವರ ನಾಯಕ ಸಾವರ್ಕರ್ ಅವರು ಬ್ರಿಟಿಷರಿಂದ 60 ರೂಪಾಯಿ ಪೆನ್ಷನ್ ತೆಗೆದುಕೊಳ್ಳುತ್ತಿದ್ದರು. ಆರ್‌ಎಸ್‌ಎಸ್ ಸಾಮಾಜಿಕ ಅಥವಾ ರಾಜಕೀಯ ಸಂಘಟನೆಯೇ ಸ್ಪಷ್ಟಪಡಿಸಬೇಕು. ಎಲ್ಲದರ ಬಗ್ಗೆ ಮಾತನಾಡುತ್ತಾರೆ ಆದರೆ ಸಾಂಸ್ಕೃತಿಕ ಸಂಘಟನೆ ಎಂದು ಹೇಳುತ್ತಾರೆ. ನಾವು ಬಿಜೆಪಿಯ ರಾಜಕೀಯ ಮಾರ್ಗದರ್ಶಕರು ಎಂದು ಹೇಳಿಬಿಡಿ," ಎಂದು ಪ್ರಿಯಾಂಕ ಪ್ರಶ್ನಿಸಿದರು.

ಮುಖ್ಯ ಚುನಾವಣಾ ಆಯುಕ್ತರಿಗೆ ನ್ಯಾಯಾಂಗ ವಿನಾಯಿತಿ ಏಕೆ ಬೇಕು ಎಂಬುದಕ್ಕೆ ಉತ್ತರವಿಲ್ಲ. ಚುನಾವಣಾ ಆಯೋಗವನ್ನೇ ಕ್ಯಾಪ್ಚರ್ ಮಾಡಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ," ಎಂದು ಆರೋಪಿಸಿದರು.

ಫ್ರಾನ್ಸ್, ಅಲ್ಬೇನಿಯಾ ವಿಚಾರ: ಫ್ರಾನ್ಸ್ ಮತ್ತು ಅಲ್ಬೇನಿಯಾದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಬೆಲೆ ಏರಿಕೆ ಮತ್ತು ಶಿಕ್ಷಣದ ಪರವಾಗಿವೆ. ಆದ-'ರೆ ಇಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಚುನಾವಣಾ ಆಯೋಗದ ವಿರುದ್ಧವಾಗಿವೆ. ಇವೆರಡರ ನಡುವೆ ಯಾವ ಸಂಬಂಧವೂ ಇಲ್ಲ," ಎಂದು ಅವರು ಸ್ಪಷ್ಟಪಡಿಸಿದರು.

ವಕ್ಫ್ ಅಧಿಕಾರಿಗಳ ಆದೇಶ ರದ್ದುಗೊಳಿಸಿ, ಕರ್ತವ್ಯ ಲೋಪದ ಬಗ್ಗೆ ತನಿಖೆ ನಡೆಸಲು ಆಗ್ರಹ

ಸಿರವಾರದ ಸರ್ವೆ ನಂ. 418ರ ಖಬರಸ್ತಾನ್ ಜಾಗದಲ್ಲಿ ಅತಿಕ್ರಮಣ ಆರೋಪ: ಸ್ಥಳ ಮರು ಪರಿಶೀಲನೆಗೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ಪಟ್ಟಣದ ಸರ್ವೆ ನಂಬರ್ 418ರಲ್ಲಿರುವ ಒಂದು ಎಕರೆ 28 ಗುಂಟೆ ಜಮೀನು ಖಬರಸ್ತಾನ್‌ಗೆ ಮೀಸಲಾದ ಪವಿತ್ರ ಸ್ಥಳವಾಗಿದ್ದು, ಈ ಜಾಗಕ್ಕೆ ಸಂಬಂಧಿಸಿದಂತೆ ಜಿಲ್ಲಾ ವಕ್ಫ್ ಅಧಿಕಾರಿಗಳು ನೀಡಿರುವ ಆದೇಶವನ್ನು ರದ್ದುಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಸ್ಥಳಕ್ಕೆ ಭೇಟಿ ನೀಡಿ ಮರು ಪರಿಶೀಲನೆ ನಡೆಸಿ ಆಸ್ತಿಯ ಗಡಿಗಳನ್ನು ಗುರುತಿಸಿ ಸಂರಕ್ಷಿಸಬೇಕು ಎಂದು ಹಳೆ ಈದ್ಗಾ ಸುನ್ನಿ ಸಂಘದ ಅಧ್ಯಕ್ಷ ಮೊಹಮ್ಮದ್ ಹುಸೇನ್ ಆಗ್ರಹಿಸಿದ್ದಾರೆ.

ಈ ಕುರಿತು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾ-ರಿಗಳಿಗೆ ಪತ್ರ ಬರೆದಿರುವ ಅವರು, 1974ರ ಗೆಜೆಟ್ ಅನುಸೂಚಿಯ ಪ್ರಕಾರ ಸರ್ವೆ ನಂಬರ್ 418ರಲ್ಲಿರುವ ಜಮೀನು ಸಂಪೂರ್ಣವಾಗಿ ಖಬರಸ್ತಾನ್ (ಸಮಾಧಿ ಸ್ಥಳ) ಎಂದು ನಮೂದಾಗಿದೆ ಎಂದು ತಿಳಿಸಿದ್ದಾರೆ. ಈ ಜಾಗವು ಗ್ರಾಮದ ಜನರಿಗೆ ಸೇರಿದ ಪವಿತ್ರ ಸ್ಥಳವಾಗಿದ್ದು, ಪ್ರಸ್ತುತ ಕೆಲವು ಸಮಾಧಿಗಳು ಕಣ್ಣಿಗೆ ಕಾಣಿಸದಿದ್ದರೂ ಭವಿಷ್ಯದಲ್ಲಿ ಅಂತ್ಯಸಂಸ್ಕಾರಕ್ಕಾಗಿ ಜಾಗದ ಅಗತ್ಯವಿರುತ್ತದೆ ಎಂದು ಹೇಳಿದ್ದಾರೆ.

ವಾಣಿಜ್ಯ ಮಳಿಗೆಗಳ ನಿರ್ಮಾಣ-ಕ್ಕೆ ಅವಕಾಶ ನೀಡುತ್ತಿರುವುದಕ್ಕೆ ಆಕ್ಷೇಪ
ಖಬರಸ್ತಾನ್‌ಗೆ ಮೀಸಲಾದ ಜಾಗದಲ್ಲಿ ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಅವಕಾಶ ನೀಡುತ್ತಿರುವುದನ್ನು ತಡೆಯದಿರುವುದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪವಾಗಿದೆ ಎಂದು ಮೊಹಮ್ಮದ್ ಹುಸೇನ್ ಆರೋಪಿಸಿದ್ದಾರೆ. ವಕ್ಫ್ ಆಸ್ತಿಯಲ್ಲಿ ಅನುಮತಿಯಿಲ್ಲದೆ ಅಕ್ರಮ ನಿರ್ಮಾಣ ನಡೆಯುತ್ತಿದ್ದರೆ ಅದನ್ನು ತಡೆಯುವುದು ಮತ್ತು ಆಸ್ತಿಯನ್ನು ಸಂರಕ್ಷಿಸುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದ್ದಾರೆ.

ಜಾಗದಲ್ಲಿ ಪ್ರಸ್ತುತ ಸಮಾಧಿಗಳು ಕಾಣಿಸುತ್ತಿಲ್ಲ ಅಥವಾ ಸಮಾಧಿಗಳಿಂದ ದೂರದಲ್ಲಿದೆ ಎಂಬ ಕಾರಣಕ್ಕೆ ಅದರ ಮೂಲ



ಉದ್ದೇಶವನ್ನು ಬದಲಾಯಿಸಲು ಸಾಧ್ಯವಿಲ್ಲ. ಖಬರಸ್ತಾನ್ ಎಂದು ಗುರುತಿಸಲಾದ ಜಾಗವನ್ನು ಅದರ ಉದ್ದೇಶಕ್ಕೆ ವಿರುದ್ಧವಾಗಿ ವಾಣಿಜ್ಯ ಚಟುವಟಿಕೆಗಳಿಗೆ ಬಳಸಲು ಅವಕಾಶ ನೀಡಿದರೆ, ಮುಂದಿನ ದಿನಗಳಲ್ಲಿ ಗ್ರಾಮದ ಜನರಿಗೆ ಸಮಾಧಿ ಮಾಡಲು ಜಾಗದ ಕೊರತೆ ಎದುರಾಗುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ನ್ಯಾಯಾಲಯದ ನಿರ್ದೇಶನ ಪಾಲನೆಗೆ ಒತ್ತಾಯ
ಈ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ನ್ಯಾಯಾಲಯ ಅನುಮತಿ ನೀಡಿಲ್ಲ ಎಂದು ಉಲ್ಲೇಖಿಸಿರುವ ಅವರು, ಸೂಕ್ತ ವಿಚಾರಣೆ ನಡೆಸಿ ಕಾನೂನಿನ ಪ್ರಕಾರ ನಿರ್ಧಾರ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಆದ್ದರಿಂದ, ನ್ಯಾಯಾಲಯದ ನಿರ್ದೇಶನಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಜಿಲ್ಲಾ ವಕ್ಫ್ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಸ್ತಿಯ ಮೇಲೆ ಅತಿಕ್ರಮಣ ನಡೆಯಲು ಅವಕಾಶವಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ಸ್ಥಳ ಪರಿಶೀಲನೆ ನಡೆಸಿ ಆಸ್ತಿ ರಕ್ಷಿಸಲು ಆಗ್ರಹ
ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಜಮೀನಿನ ದಾಖಲೆಗಳನ್ನು ಪರಿಶೀಲಿಸಬೇಕು. ಸರ್ವೆ ನಂಬರ್ 418ರ ಜಾಗದ ನಿಖರ ಗಡಿಗಳನ್ನು ಗುರುತಿಸಿ, ಅತಿಕ್ರಮಣವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ನಿಯಮಬಾಹಿರ ನಿರ್ಮಾಣ ಕಂಡುಬಂದಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಂಡು ಖಬರಸ್ತಾನ್ ಜಾಗವನ್ನು ಸಂರಕ್ಷಿಸಬೇಕು ಎಂದು ಹಳೆ ಈದ್ಗಾ ಸುನ್ನಿ ಸಂಘದ ಅಧ್ಯಕ್ಷ ಮೊಹಮ್ಮದ್ ಹುಸೇನ್ ಮನವಿ ಮಾಡಿದ್ದಾರೆ.

ಗ್ರಾಮದ ಸಾರ್ವಜನಿಕರ ಧಾರ್ಮಿಕ ಭಾವನೆಗಳು ಹಾಗೂ ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ಸಂಬಂಧಪಟ್ಟ ಅಧಿಕಾ-ರಿಗಳು ದಾಖಲೆಗಳ ಆಧಾರದ ಮೇಲೆ ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಅವರ ಪ್ರಮುಖ ಆಗ್ರಹವಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101